

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 31 ಜುಲೈ–ಸೆಪ್ಟೆಂಬರ್ 2018 ರೂ. 10/– ಸಂಚಿಕೆ 02

## ಶ್ರೀ ಗಣೇಶೋತ್ಸವ



## ಶ್ರೀ ದುರ್ಗಾ ನಮಸ್ಕಾರ





## ಪ್ರತಿಭಾ ಮೇಳ ಮತ್ತು ಪುರಸ್ಕಾರ







**ಗಮನಿಸಿ**

- 04.11.2018 – ಎ.ಪಿ.ಎಲ್. 2018
- 17.11.2018 – ತುಳಸಿ ಸಂಕೀರ್ತನೆ
- 25.12.2018 – ಒಂದು ದಿನದ ಪ್ರವಾಸ
- 08.12.2018 – ಕ್ಯಾಲೆಂಡರ್ ಬಿಡುಗಡೆ
- 06.01.2019 – ಆನಂದ ಮಿಲನ 2019
- 20.01.2019 – ಕ್ರೀಡಾ ಮಿಲನ 2019

*With best compliments from :*

# TEDMAG
# ENGINEERING & MANAGEMENT CONSULTANTS (P) LTD.

SWAGAT, 1209, 11th CROSS,
HSR LAYOUT SECTOR I,
BANGALORE – 560 102.

TEL.: +91 (0)80 22586129
FAX: +91 (0)80 22589134

E-mail:
Bangalore : tedmagemc@hotmail.com
sridhar_bhat@yahoo.com
Chennai : myram47@gmail.com
Mumbai : mindi1940@yahoo.com

- MILK PROCESSING
- FOOD PROCESSING
- PLANT TISSUE CULTURE
- ALLIED INDUSTRIES

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 31 ಸಂಚಿಕೆ 02

ಅಧ್ಯಕ್ಷರು :
ಗೀತಾ ವಾಸುದೇವ ರಾವ್

ಕಾರ್ಯದರ್ಶಿ :
ಎಸ್. ಹರಿದಾಸ ಉಪಾಧ್ಯ

ಸಂಪಾದಕರು :
ಎಂ. ಸತ್ಯನಾರಾಯಣ ಭಟ್

ಸಂಪಾದಕ ಮಂಡಳಿ :
ಹರಿದಾಸ ಮುನ್ನೂರು
ಬಿ. ರಾಮದಾಸ ತಂತ್ರಿ
ಡಿ. ಶರತ್ ಕುಮಾರ ಭಟ್
ಕೆ.ಎನ್. ಅಡಿಗ
ರಂಜಿತ್ ಯಡಪಾಡಿತ್ತಾಯ
ವೈ. ಜಯಂತರಾವ್
ಟಿ.ಎಸ್. ನಾಗರಾಜ ಉಪಾಧ್ಯಾಯ

ಸಲಹೆಗಾರರು :
ಶ್ರೀಮತಿ ವಿಜಯಲಕ್ಷ್ಮಿ ಭಟ್

ಜಾಹೀರಾತು ಸಮನ್ವಯ :
ಶ್ರೀ ವೈ. ರಾಧಾಕೃಷ್ಣ
ಶ್ರೀ ಬಿ.ಎಸ್. ಬಾಲಚಂದ್ರ
ತೋಳ್ಪಾಡಿ

ಛಾಯಾಚಿತ್ರಗಳು
ಕೆ. ಬಾಲಕೃಷ್ಣ ಉಪಾಧ್ಯಾಯ

ವಿಳಾಸ :
ಆನಂದ ಬಳಗ
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು – 560 001
ದೂರವಾಣಿ : 2559 4457

Website:
www.anandabalaga.org

# ಅಧ್ಯಕ್ಷರ ಮಾತು



ಪ್ರಿಯ ಸದಸ್ಯ ಬಂಧುಗಳೇ,

ಶತದ್ಯುತಿ ಆರಂಭವಾಗಿದೆ. ನವರಾತ್ರಿಯ ಪರ್ವಕಾಲದಲ್ಲಿ ದುರ್ಗಾಮಾತೆ ಎಲ್ಲರಿಗೂ ಸನ್ಮಂಗಳವನ್ನುಂಟು ಮಾಡಲಿ ಎಂದು ನನ್ನ ಹಾರೈಕೆ. ಜುಲೈ–ಸೆಪ್ಟೆಂಬರ್ ತಿಂಗಳು ಪ್ರತಿ ವರ್ಷವೂ ಹಬ್ಬಹರಿದಿನಗಳ ಸಂತಸದ ಸಮಯ. ನಾಗರ ಪಂಚಮಿ, ಕೃಷ್ಣ ಜನ್ಮಾಷ್ಟಮಿ, ಗಣೇಶ ಚತುರ್ಥಿ, ಅನಂತ ಚತುರ್ದಶಿ ಹೀಗೆ ವಿಶೇಷ ದಿನಗಳ ಸರಮಾಲೆ. ಆನಂದ ಬಳಗದ ಮಟ್ಟಿಗೆ ಈ ಮೂರು ತಿಂಗಳು ಅತ್ಯಂತ ಚಟುವಟಿಕೆಯ ಸಮಯ. ಯುವವಿಭಾಗದ ನೇತೃತ್ವದಲ್ಲಿ ನಡೆದ ಪ್ರತಿಭಾ ಸ್ಪರ್ಧೆಗಳು ನಮ್ಮ ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯ ಪ್ರದರ್ಶನಕ್ಕೆ ಅವಕಾಶ ನೀಡಿದರೆ, ಪ್ರತಿಭಾ ಮೇಳ ಮಕ್ಕಳ ಕಲಾ ಪ್ರೌಢಿಮೆಯನ್ನು ಪ್ರದರ್ಶಿಸಲು ಸೂಕ್ತ ವೇದಿಕೆ ಕಲ್ಪಿಸಿಕೊಟ್ಟಿದೆ. ಪ್ರತಿವರ್ಷದಂತೆ ಈ ವರ್ಷವೂ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಅತ್ಯಂತ ಉತ್ತಮ ಅಂಕಗಳನ್ನು ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಇಂತಹ ಸತ್ಕಾರ್ಯ ವಿದ್ಯಾರ್ಥಿಗಳಿಗೆ ಮತ್ತಷ್ಟು ಸಾಧಿಸಲು ಉತ್ತೇಜನ ನೀಡುವುದರ ಜೊತೆ, ಇತರರಿಗೆ ಸ್ಫೂರ್ತಿಯಾಗಲಿದೆ. ಈ ವರ್ಷವೂ ಪ್ರತಿಭಾ ಪುರಸ್ಕಾರದ ಪ್ರಾಯೋಜಕತ್ವವನ್ನು ವಹಿಸಿದ ಭೀಮಾ ಜ್ಯುವೆಲರ್ಸ್‌ನ ಮಾಲಿಕರಾದ ಶ್ರೀ ಬಿ. ಕೃಷ್ಣನ್‌ರವರ ಉದಾರತೆಗೆ ಅಭಿವಂದನೆಗಳು.

ಧಾರ್ಮಿಕ ವಿಭಾಗದ ವತಿಯಿಂದ ಆನಂದ ಸಭಾಗೃಹದಲ್ಲಿ ನಡೆದ ಶ್ರೀ ದುರ್ಗಾ ನಮಸ್ಕಾರ ಹಾಗೂ ಯುವ ವಿಭಾಗದವರು ಆಯೋಜಿಸಿದ್ದ ಶ್ರೀ ಗಣೇಶೋತ್ಸವ ನಮ್ಮ ಸದಸ್ಯರಲ್ಲಿ ಧಾರ್ಮಿಕ ಶ್ರದ್ಧೆಯನ್ನು ಮತ್ತೊಮ್ಮೆ ಪ್ರಕಟಿಸಿದೆ. ಯುವ ವಿಭಾಗವು ಸಂಯೋಜಿಸಿರುವ ಜೀವನದಲ್ಲಿ ಯಶಸ್ಸು ಬಗ್ಗೆ ವಿಚಾರ ಸಂಕಿರಣಕ್ಕೆ ಸದಸ್ಯರ ಪ್ರತಿಕ್ರಿಯೆ ಚೆನ್ನಾಗಿದ್ದು, ತಜ್ಞರಾದ ಪ್ರೊ|| ಕೆ.ಪಿ. ಪುತ್ತೂರಾಯ ಮತ್ತು ಡಾ. ಎಸ್.ಎನ್. ಭರತ್ ಚಂದ್ರರವರ ಅನುಭವದ ಮಾತುಗಳು ಮತ್ತು ಸಲಹೆಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸದಸ್ಯರಿಗೆ ಅತ್ಯುಪಯುಕ್ತವಾಗಲಿದೆ. ಈ ಎಲ್ಲಾ ಕಾರ್ಯಚಟುವಟಿಕೆಗಳನ್ನು ಅತ್ಯಂತ ಮುತುವರ್ಜಿಯಿಂದ ಯಶಸ್ವಿಯಾಗಿ ಸಂಯೋಜಿಸಿರುವ ಸಾಂಸ್ಕೃತಿಕ, ಯುವ ಹಾಗೂ ಧಾರ್ಮಿಕ ವಿಭಾಗದ ಸಂಚಾಲಕರು ಮತ್ತು ಅವರ ಕ್ರಿಯಾಶೀಲ ಕಾರ್ಯತಂಡಕ್ಕೆ ಅಭಿನಂದನೆಗಳು.

ಇನ್ನು ಬಳಗದ 30ನೇ ವಾರ್ಷಿಕ ಸರ್ವಸದಸ್ಯರ ಸಭೆ ದಿನಾಂಕ 9.9.2018ರಂದು ನಡೆದಿದ್ದು, ಬಳಗದ ಮುಂದಿನ ಕಾರ್ಯಚಟುವಟಿಕೆಗಳ ಬಗ್ಗೆ ಸದಸ್ಯರು ನೀಡಿದ ಸಲಹೆ–ಸೂಚನೆಗಳನ್ನು ಸೂಕ್ತವಾಗಿ ಅಳವಡಿಸಿ, ಬಳಗವನ್ನು ಮತ್ತಷ್ಟು ಪ್ರಗತಿಪರವಾಗಿ ಮುನ್ನಡೆಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು. ಮುಂದೆ ಆನಂದ ಬಳಗದ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ, ಆನಂದ ಮಿಲನ, ಕ್ರೀಡಾ ಮಿಲನಗಳು ನಡೆಯಲಿವೆ. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿ ನನ್ನ ಅಪೇಕ್ಷೆ. ಸದಸ್ಯರು ಬಳಗದ ಯಶಸ್ಸಿಗೆ ಸದಾ ನೀಡುತ್ತಾ ಬಂದಿರುವ ಸಹಕಾರಕ್ಕಾಗಿ ನಾನು ಆಭಾರಿಯಾಗಿದ್ದೇನೆ ಹಾಗೂ ಮುಂದೆಯೂ ಇದೇ ರೀತಿಯ ಬೆಂಬಲವನ್ನು ನಿರೀಕ್ಷಿಸುತ್ತೇನೆ.

ತಮಗೆಲ್ಲರಿಗೂ ಮುಂಬರುವ ದೀಪಾವಳಿಯ ಹಾರ್ದಿಕ ಶುಭಾಶಯಗಳು.

– ಗೀತಾ ವಾಸುದೇವರಾವ್

**Executive Committee Members : 2018-2020**

| Name | Contact Numbers |
|---|---|
| ***President*** | |
| Geetha Vasudeva Rao | 98808 99997 |
| ***Vice President*** | |
| B. Ramachandra Upadhya | 99024 00072 |
| Smt. Vijayalakshmi Bhat S. | 98441 52107 |
| ***Secretary*** | |
| S. Haridas Upadhya | 94480 01892 |
| ***Joint Secretary*** | |
| A. Sandeep Rao | 98450 98150 |
| ***Treasurer*** | |
| Y. Radhakrishna | 98440 58851 |
| ***Asst. Treasurer*** | |
| B.S. Balachandra Tolpadi | 94481 34268 |
| ***Convener, Cultural Wing*** | |
| H. Ramesh Bhat | 98450 24708 |
| ***Convener, Religious Wing*** | |
| Y. Jayantha Rao | 94482 74519 |
| ***Convener, Youth Wing*** | |
| M. Krishna Prasad | 98450 18183 |
| ***Convener, Edn. Assistance Program*** | |
| Sharath Chandra S.N. | 98860 40271 |
| ***Convener, Public Relation Wing*** | |
| K.N. Adiga | 94488 48154 |
| ***Convener, Membership Devt. Wing*** | |
| M.K. Gurumurthy | 98440 22692 |
| ***Convener, Community Services*** | |
| P.C. Rao | 98444 46309 |
| ***Convener, Media & Communications*** | |
| M. Dinesh Rao | 98456 88955 |
| ***Editor, Brughu Vani*** | |
| M. Sathyanarayana Bhat | 99458 02607 |
| ***Members*** | |
| Kasturi Aithal | 98803 98353 |
| ***Co-opted Members*** | |
| Geetha P.R. Rao | 99459 38411 |
| M Mohan Rao | 98453 79956 |
| Jayaprakash Mady | 98450 09669 |
| ***Permanent Invitees / Past Presidents*** | |
| P.S. Bagilthaya | 98440 83582 |
| K. Vasudeva Rao | 98450 57111 |
| Padubidri Raghavendra Rao | 2287 2705 |
| UAP Ballal | 2226 7609 |
| STR Madi | 99029 77948 |
| ***Special Invitees*** | |
| T.S. Nagaraja Upadhyaya | 93412 26763 |
| Sudha M Rao | 99011 27738 |
| U V Krishna Murthy | 98440 24136 |
| Dr. (Smt.) Veena Sharath | 99860 80271 |
| Y. Sripathy Bhat | 65626972 |
| K. Gopala Krishna | 99801 28049 |
| Madhavi Ballal | 99860 39107 |

ಒಳಪುಟಗಳಲ್ಲಿ . . .

| | |
|---|---|
| ಅಧ್ಯಕ್ಷರ ಮಾತು ... | 1 |
| ಆನಂದ ಬಳಗ ಪ್ರೀಮಿಯರ್ ಲೀಗ್ – 2018 ... | 3 |
| ಆನಂದ ಮಿಲನ – 2019 ... | 4 |
| ದುರ್ಗಾ ನಮಸ್ಕಾರ ... | 5 |
| ಕ್ರೀಡಾ ಮಿಲನ – 2019 ... | 6 |
| ಗಣೇಶೋತ್ಸವ ... | 7 |
| ಪ್ರತಿಭಾ ಮೇಳ ... | 10 |
| ವಾರ್ಷಿಕ ಮಹಾಸಭೆ ... | 13 |
| ಕರಾವಳಿ ರತ್ನ ಪ್ರಶಸ್ತಿ ಪ್ರದಾನ ... | 17 |
| ಜೀವನದಲ್ಲಿ ಯಶಸ್ಸು – ವಿಚಾರ ಸಂಕಿರಣ ... | 18 |
| ಕಬ್ಬನ್‌ಪಾರ್ಕ್ ವಾಕಿಂಗ್ ... | 20 |
| ಏಕ ವಿಂಶತಿ ದೇವಿಸ್ತುತಿ ... | 21 |
| ಸುದ್ದಿ ಸಂಗ್ರಹ ... | 23 |

ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹ ಸಂಪಾದಕ ಮಂಡಳಿಯದಲ್ಲ.

## ಸದಸ್ಯರಲ್ಲಿ ಮನವಿ


ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ–ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ . ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ದಿ–ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ.. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರ ಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ :

ಎಂ. ಸತ್ಯನಾರಾಯಣ ಭಟ್
''ಕೃಷ್ಣ ಕೃಪಾ'', 12/1, 5ನೇ ಮೈನ್, ಇಟ್ಟುಮಡು,
ಬನಶಂಕರಿ 3ನೇ ಸ್ಟೇಜ್, ಬೆಂಗಳೂರು–560 085
E-mail: msbhat1958@gmail.com

# ಆನಂದ ಬಳಗ ಪ್ರೀಮಿಯರ್ ಲೀಗ್ 2018

## 04-11-2018



ಈ ಹಿಂದೆ ಸಂಯೋಜಿಸಿದ ಎ.ಪಿ.ಎಲ್ 2014 ಮತ್ತು 2016ರ
ಯಶಸ್ಸು ಮತ್ತು ಜನಪ್ರಿಯತೆಯಿಂದ ಸ್ಫೂರ್ತಿಗೊಂಡ ಯುವ ವಿಭಾಗ
ಇದೀಗ ಮೂರನೇ ಆವೃತ್ತಿ ಎ.ಪಿ.ಎಲ್ (ಆನಂದ ಬಳಗ ಪ್ರೀಮಿಯರ್ ಲೀಗ್)
2018ನ್ನು ಸಂಯೋಜಿಸುತ್ತಿದೆ

ಬಳಗದ ಎಲ್ಲಾ ಉಪವಿಭಾಗಗಳ ಸಹಯೋಗದೊಂದಿಗೆ
ದಿ.04-11-2018ರ ಭಾನುವಾರ ಬೆಳಿಗ್ಗೆ 6.30 ರಿಂದ ಸಂಜೆ 6ರವರೆಗೆ
ಎ.ಪಿ.ಎಲ್ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ.



ಸ್ಥಳ: ರೈಲ್ವೇ ಕ್ರೀಡಾಂಗಣ (ರೈಲ್ವೇ ಆಸ್ಪತ್ರೆ ಎದುರು)
ಎಂ.ಜಿ. ಕಾಲನಿ, ಓಕುಳಿಪುರಂ, ಬೆಂಗಳೂರು – 560 023

ಆನಂದ ಬಳಗದ ಸದಸ್ಯರೇ ಪ್ರಾಯೋಜಿಸಿರುವ ಎಂಟು ತಂಡಗಳು ಪ್ರಶಸ್ತಿಗಾಗಿ ಸೆಣೆಸಾಡಲಿದ್ದು ವಿಜೇತ ತಂಡಕ್ಕೆ ಆಕರ್ಷಕ ರೋಲಿಂಗ್ ಶೀಲ್ಡ್ ಮತ್ತು ನಗದು ಬಹುಮಾನ ಲಭಿಸಲಿದೆ. (ಎಪಿಎಲ್‌ನಲ್ಲಿ ಭಾಗವಹಿಸುವ ತಂಡಗಳ ವಿವರಗಳನ್ನು ಪುಟ ಪುಟ 9ರಲ್ಲಿ ನೀಡಲಾಗಿದೆ.)

ಎಪಿಎಲ್ ದಿನ ಸದಸ್ಯರಿಗೆ ಬೆಳಗ್ಗಿನ ಉಪಾಹಾರ, ಮಧ್ಯಾಹ್ನದ ಭರ್ಜರಿ ಭೋಜನ ಮತ್ತು ಸಂಜೆಯ ಲಘು ಉಪಾಹಾರದ ವ್ಯವಸ್ಥೆಯನ್ನು ಕ್ರೀಡಾಂಗಣದಲ್ಲೇ ಮಾಡಲಾಗಿದೆ. ಅದಲ್ಲದೆ ಐಸ್‌ಕ್ರೀಂ, ಚಾಟ್ಸ್ ಮೊದಲಾದ ತಿಂಡಿ–ತಿನಿಸುಗಳೂ ದಿನವಿಡೀ ಲಭ್ಯವಿರುತ್ತದೆ.

ಸದಸ್ಯರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ದಿನಪೂರ್ತಿ ನಮ್ಮೊಂದಿಗಿದ್ದು, ಕ್ರೀಡಾಳುಗಳನ್ನು ಪ್ರೋತ್ಸಾಹಿಸಿ, ಎಪಿಎಲ್ 2018ನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ಎಸ್. ಹರಿದಾಸ ಉಪಾಧ್ಯ
ಕಾರ್ಯದರ್ಶಿ

ಶ್ರೀಮತಿ ಗೀತಾ ವಾಸುದೇವರಾವ್
ಅಧ್ಯಕ್ಷರು

**ವಿಶೇಷ ಆಕರ್ಷಣೆ:** ಪಂದ್ಯಾವಳಿಯಲ್ಲಿ ವಿವಿಧ ವಿಶೇಷ ಸಾಧನೆ ಮಾಡಿದವರಿಗೆ ಆಕರ್ಷಕ 'On the Spot' ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಲಾಗುವುದು. ಮಕ್ಕಳಿಗೂ ವಿವಿಧ ರೀತಿಯ ಮೋಜಿನ ಹಾಗೂ ಮನೋರಂಜನಾ ಆಟಗಳನ್ನು ಏರ್ಪಡಿಸಲಾಗುವುದು.

ವಿ.ಸೂ: ಬೃಹತ್ ಸಂಖ್ಯೆಯಲ್ಲಿ ವೀಕ್ಷಕರು ಸೇರಲಿರುವ ಎಪಿಎಲ್ 2018 ಕ್ರೀಡಾಂಗಣದ ಸುತ್ತ ಜಾಹೀರಾತು ಬ್ಯಾನರ್‌ಗಳನ್ನು ಹಾಕಲು ಅವಕಾಶವಿದ್ದು, ಇದರ ಸದುಪಯೋಗವನ್ನು ಪಡೆಯಲು ಆಸಕ್ತಿಯುಳ್ಳವರು ಯುವ ವಿಭಾಗದ ಸಂಚಾಲಕರಾಗಿರುವ ಶ್ರೀ ಎಂ.ಕೆ. ಪ್ರಸಾದ್ (98450 18183) / ಎಪಿಎಲ್ ಸಂಚಾಲಕರಾದ ಶ್ರೀ ಎಂ.ಕೆ. ಗುರುಮೂರ್ತಿ (98440 22692) /ಶ್ರೀ ಸಂದೀಪ್‌ರಾವ್ (98450 98150) ಇವರನ್ನು ಸಂಪರ್ಕಿಸಲು ಕೋರಲಾಗಿದೆ.

## ಆನಂದ ಮಿಲನ 2019 : ದಿನಾಂಕ 6.01.2019

ಆನಂದ ಬಳಗದ ಯುವ ವಿಭಾಗ ಪ್ರಸ್ತುತಪಡಿಸುವ

ಗಮನಿಸಿ! ಭಾಗವಹಿಸಿ!!

# ಆನಂದ ಮಿಲನ – 2019



**ದಿನಾಂಕ 06.01.2019ರ ಭಾನುವಾರ ಸಂಜೆ 4.00 ರಿಂದ 8.30ರವರೆಗೆ**
ವೈವಿಧ್ಯಮಯವಾಗಿ ನಡೆಯಲಿದೆ

**ಸ್ಥಳ : ಪ್ರಸನ್ನ ಕಲ್ಯಾಣ ಮಂಟಪ**
10'ಇ' ಮೈನ್, ಜಯನಗರ I ಬ್ಲಾಕ್, ಬೆಂಗಳೂರು – 560 011

**ವಿನೂತನ ರೀತಿಯಲ್ಲಿ ಸಂಯೋಜಿಸಲ್ಪಡುವ ಮಿಲನದ ಹೈ–ಲೈಟ್ಸ್**

- ಎಳೆ ಮಕ್ಕಳಿಂದ ಹಿರಿ ವಯಸ್ಸಿನವರು ಪಾಲ್ಗೊಳ್ಳಬಹುದಾದ ಮನೋರಂಜನಾ ಆಟಗಳು.
- ಬಗೆ–ಬಗೆಯ ತಿಂಡಿಗಳನ್ನೊಳಗೊಂಡ ಆಹಾರ–ಮೇಳ – ಕರಾವಳಿ ಮತ್ತು ಸ್ಥಳೀಯ ತಿಂಡಿಗಳ ಕೌಂಟರ್‌ಗಳು.
- ರಿಯಾಯಿತಿ ದರದಲ್ಲಿ ಕೂಪನ್‌ಗಳು ಲಭ್ಯ – ಸಂಜೆಯಿಂದ ರಾತ್ರಿಯವರೆಗೆ ನಿಮ್ಮಿಷ್ಟದ ತಿಂಡಿಗಳನ್ನು ಸವಿಯುವ ಅವಕಾಶ.
- ಸಂಗೀತ ನೃತ್ಯ, ನಾಟಕ, ಆಟೋಟ.. ಹೀಗೆ ಹತ್ತು ಹಲವು ಕಾರ್ಯಕ್ರಮಗಳು.
- ಎಲ್ಲರಿಗೂ ಆಕರ್ಷಕ ಬಹುಮಾನ ಗೆಲ್ಲುವ ಅವಕಾಶ.
- ಹಿರಿಯರಿಗೆ, ಮಹಿಳೆಯರಿಗೆ, ದಂಪತಿಗಳಿಗೆ ಹಾಗೂ ಕಿರಿಯರಿಗೆ ಪ್ರತ್ಯೇಕ ಮನೋರಂಜನಾ ಚಟುವಟಿಕೆಗಳು.

ಸದಸ್ಯರಿಂದ – ಸದಸ್ಯರಿಗಾಗಿ – ಸದಸ್ಯರಿಗೋಸ್ಕರ ರೂಪುಗೊಳ್ಳಲಿರುವ ಹೊಸವರ್ಷದ ಸಂಭ್ರಮದ ಸಮ್ಮಿಲನದಲ್ಲಿ ಬಳಗದ ಸದಸ್ಯರು ಅಧಿಕ ಸಂಖ್ಯೆಯಲ್ಲಿ ಆಗಮಿಸಿ ಪಾಲ್ಗೊಳ್ಳಬೇಕಾಗಿ ಕೋರಿಕೆ.

ಆನಂದ ಮಿಲನ 2019 ಹೆಚ್ಚಿನ ವಿವರಗಳನ್ನು ಆನಂದ ಬಳಗದ ವೆಬ್‌ಸೈಟ್ anandabalaga.org ಯಲ್ಲಿ ತಿಳಿಸಲಾಗುವುದು.

**– ಎಂ.ಕೆ. ಪ್ರಸಾದ್, ಸಂಚಾಲಕರು, ಯುವವಿಭಾಗ**

# ಸದಸ್ಯರಿಗೆ ಒಂದು ದಿನದ ಪ್ರವಾಸ

ಪ್ರತಿ ವರ್ಷದಂತೆ ಸಾಂಸ್ಕೃತಿಕ ವಿಭಾಗವು ದಿನಾಂಕ **25.12.2018ರ ಮಂಗಳವಾರ** ಪ್ರೇಕ್ಷಣೀಯ ಸ್ಥಳಗಳಿಗೆ ಒಂದು ದಿನದ ಪ್ರವಾಸವನ್ನು ಸಂಯೋಜಿಸಲಿದೆ. ಆಸಕ್ತರು ಪ್ರವಾಸದ ಬಗ್ಗೆ ಹೆಚ್ಚಿನ ವಿವರಗಳನ್ನು ದಿನಾಂಕ 01.12.2018 ರ ನಂತರ, ಈ ಕೆಳಗಿನ ಕಾರ್ಯಕರ್ತರನ್ನು ಸಂಪರ್ಕಿಸಿ ಪಡೆಯಲು ಕೋರಲಾಗಿದೆ.

1. **ಹೆಚ್. ರಮೇಶ್ ಭಟ್, ಸಂಚಾಲಕರು,** ಸಾಂಸ್ಕೃತಿಕ ವಿಭಾಗ (98450 24708)
2. **ಶ್ರೀಮತಿ ಗೀತಾ ಪಿ.ಆರ್. ರಾವ್** (99459 38411)
3. **ಶ್ರೀಮತಿ ಸುಧಾ ಎಂ. ರಾವ್** (99011 27738)

# ವಿದ್ಯುಕ್ತವಾಗಿ ನಡೆದ ದುರ್ಗಾ ನಮಸ್ಕಾರ

ಬೆಂಗಳೂರಿನ ಜನರಿಗೆ ಅಪರೂಪದಲ್ಲಿ ನೋಡಲು ಸಿಗುವ ದೀಪ ದುರ್ಗಾ ನಮಸ್ಕಾರವನ್ನು ಆನಂದ ಬಳಗದ ಧಾರ್ಮಿಕ ವಿಭಾಗವು ಪ್ರತಿವರ್ಷವೂ ನಡೆಸುತ್ತಾ ಬಂದಿದೆ. ಈ ವರ್ಷದ ದುರ್ಗಾ ನಮಸ್ಕಾರವನ್ನು ದಿನಾಂಕ 29-7-2018ರ ಭಾನುವಾರ ಬನ್ನೇರು ಘಟ್ಟ ರಸ್ತೆಯಲ್ಲಿರುವ ಆನಂದ ಸಭಾಗೃಹದಲ್ಲಿ ಸಂಯೋಜಿಸ ಲಾಗಿತ್ತು. ಸಂಜೆ 4 ರಿಂದಲೇ ವಿದ್ಯಾಪೀಠದ ಕಾರ್ಯದರ್ಶಿ ವಿದ್ವಾನ್ ಯು. ಕೇಶವಾಚಾರ್ಯ ಅವರ ಪ್ರಧಾನ ಪೌರೋಹಿತ್ಯ ದಲ್ಲಿ ಪೂಜೆಗೆ ವಿಶೇಷವಾದ ಮಂಡಲ ಹಾಕುವ ಕಾರ್ಯ ಆರಂಭವಾಗಿದ್ದು, ಸುಮಾರು 7 ಘಂಟೆಗೆ ಮಹಾ ಮಂಗಳಾರತಿ ಆಯಿತು ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ. ಜಯಂತರಾವ್ ಮತ್ತು ಶ್ರೀಮತಿ ಮಾಲಿನಿ ಜಯಂತರಾವ್‌ರವರು ಪ್ರಧಾನ ಕರ್ತೃ ಗಳಾಗಿದ್ದರು.

ಬಳಗದ ಉತ್ಸಾಹೀ ಸದಸ್ಯರು ಮುತುವರ್ಜಿ ಯಿಂದ ರಚಿಸಿದ್ದ ಆಕರ್ಷಕ ಮಂಟಪ, ಅದಕ್ಕೆ ಇನ್ನೂ ಮೆರುಗು ನೀಡಿದ ಬಣ್ಣದ ರಂಗೋಲಿ, ಮಂಟಪದ ಮಧ್ಯೆ ದೇವಿಗೆ ಪ್ರಿಯವಾದ ಕೇಪಳ ಹೂ ಹಾಗೂ ಇನ್ನಿತರ ಹೂಗಳಿಂದ ಸರ್ವಾಲಂಕಾರಗೊಂಡ ದೀಪದಲ್ಲಿ ಆವಾಹನೆಗೊಂಡ ದುರ್ಗಾಮಾತೆಯನ್ನು ಭಕ್ತಾಭಿಮಾನಿ ಗಳು ಕಣ್ತುಂಬಿಸಿಕೊಂಡರು. ಶಂಖ, ಜಾಗಟೆ ಮತ್ತು ಚೆಂಡೆ ವಾದನ, ಮಂಗಳಾರತಿ ಸಂದರ್ಭದ ಸಡಗರವನ್ನು ಮತ್ತಷ್ಟು ಹೆಚ್ಚಿಸಿತು.

ದುರ್ಗಾನಮಸ್ಕಾರದ ಪರ್ವಕಾಲದಲ್ಲಿ ಆಗಮಿಸಿದ ಶ್ರೀ ಪೇಜಾವರ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ದೇವಿಗೆ ಮಂಗಳಾರತಿ






ಮಾಡಿದರು. ಅವರು ತಮ್ಮ ಅನುಗ್ರಹ ಸಂದೇಶದಲ್ಲಿ ಆನಂದ ಬಳಗ ಸಮಾಜಕ್ಕೆ ಆನಂದ ನೀಡುವ ಕೆಲಸವನ್ನು ಸದಾ ಮಾಡುತ್ತ ಬಂದಿದ್ದು, ಇಂತಹ ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿರುವುದು ಶ್ಲಾಘನೀಯ ಎಂದರು. ನಮ್ಮ ಸಂಸ್ಕೃತಿ, ಸಂಪ್ರದಾಯಗಳು ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆಯಿಂದ ಕ್ರಮೇಣ ನಶಿಸಿ ಹೋಗುತ್ತಿದ್ದು, ಆನಂದ ಬಳಗದಂತಹ ಸಂಸ್ಥೆಗಳು ನಮ್ಮ ಸಂಸ್ಕೃತಿ, ಆಚಾರ - ವಿಚಾರಗಳ ಮಹತ್ವವನ್ನು ಸಮಾಜಕ್ಕೆ ಅದರಲ್ಲೂ ಯುವಜನಾಂಗಕ್ಕೆ ಪರಿಚಯಿಸುವ, ಅಗತ್ಯವನ್ನು ವಿವರಿಸಿದರು.

ಕಲಿಯುಗದಲ್ಲಿ ಕ್ಷಿಪ್ರವಾಗಿ ಫಲವನ್ನು ನೀಡುವ ದುರ್ಗಾ ಮಾತೆಯ ಈ ಆರಾಧನಾಕಾರ್ಯದಲ್ಲಿ ಬಳಗದ ಸದಸ್ಯರು ಸೇವಾ ಕಾಣಿಕೆ ನೀಡುವುದರ ಮೂಲಕ ಪಾಲ್ಗೊಂಡಿದ್ದು, ಅವರೆಲ್ಲರಿಗೂ ಮೊದಲಿಗೆ ಸೇವಾ ಸಂಕಲ್ಪ ಮಾಡುವ ಅವಕಾಶವನ್ನು ಕಲ್ಪಿಸಲಾಗಿದ್ದು, ಪೂಜಾ ನಂತರ ವಿಶೇಷ ಫಲ-ಪುಷ್ಪ ಪ್ರಸಾದವನ್ನು ನೀಡಲಾಯಿತು.

ಸಾಮಾನ್ಯವಾಗಿ ಆನಂದ ಸಭಾಗೃಹದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಸದಸ್ಯರ ಸಂಖ್ಯೆ ಕಡಿಮೆ ಇರುತ್ತದೆ ಎಂಬ ಅಭಿಪ್ರಾಯವನ್ನು ಸದಸ್ಯರು ಸುಳ್ಳು ಮಾಡಿದ್ದಾರೆ. ಅತ್ಯಧಿಕ ಸಂಖ್ಯೆಯಲ್ಲಿ ಆಗಮಿಸಿ, ಯಶಸ್ವಿಗೊಳಿಸಿ ರುವುದಕ್ಕೆ ಸದಸ್ಯರನ್ನು ಅಭಿನಂದಿಸಲೇ ಬೇಕು. ಜೊತೆಗೆ ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ. ಜಯಂತ ರಾವ್ ಮತ್ತು ಅವರ ಕ್ರಿಯಾಶೀಲ ಕಾರ್ಯತಂಡವು ಈ ಧಾರ್ಮಿಕ ಕಾರ್ಯಕ್ರಮದ ಯಶಸ್ಸಿಗಾಗಿ ತೋರಿದ ವಿಶೇಷ ಆಸಕ್ತಿ, ಮುತುವರ್ಜಿ ಹಾಗೂ ಪಟ್ಟ ಶ್ರಮವೂ ಶ್ಲಾಘನೀಯ.

# ಆನಂದ ಬಳಗ (ರಿ.) ಯುವ ವಿಭಾಗ

ಆನಂದ ಬಳಗದ ವಾರ್ಷಿಕೋತ್ಸವದ ಅಂಗವಾಗಿ ದಿನಾಂಕ 20-01-2019ನೇ ಭಾನುವಾರ
ಜಯನಗರ 7ನೇ ಬ್ಲಾಕಿನ ನ್ಯಾಷನಲ್ ಕಾಲೇಜ್ ಕ್ರೀಡಾ ಮೈದಾನದಲ್ಲಿ (ಹೆಚ್.ಎನ್. ಕಲಾಕ್ಷೇತ್ರ ಪಕ್ಕದಲ್ಲಿ)



## ಕ್ರೀಡಾ ಮಿಲನ 2019



ಏರ್ಪಡಿಸಲಾಗಿದೆ.

ಬೆಳಿಗ್ಗೆ 9.00 ರಿಂದ ಸಂಜೆ 5.00ರ ವರೆಗೆ ನಡೆಯಲಿರುವ ಕ್ರೀಡಾ ಮೇಳದಲ್ಲಿ
ಬಳಗದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದಲ್ಲದೆ, ತಮ್ಮ ಕುಟುಂಬದವರೊಡನೆ ಬಂದು
ಸ್ಪರ್ಧಾಳುಗಳನ್ನು ಪ್ರೋತ್ಸಾಹಿಸುವುದರ ಮೂಲಕ ಕ್ರೀಡಾ ಮಿಲನವನ್ನು ಯಶಸ್ವಿಗೊಳಿಸಬೇಕಾಗಿ ಕೋರಿಕೆ.

| ಗೀತಾ ವಾಸುದೇವ ರಾವ್ | ಎಸ್. ಹರಿದಾಸ್ ಉಪಾಧ್ಯ | ಎಂ.ಕೆ. ಪ್ರಸಾದ್ |
|---|---|---|
| ಅಧ್ಯಕ್ಷರು, ಆನಂದ ಬಳಗ | ಕಾರ್ಯದರ್ಶಿ, ಆನಂದ ಬಳಗ | ಸಂಚಾಲಕರು, ಯುವ ವಿಭಾಗ |

## ಕಾರ್ಯಕ್ರಮ



| | | |
|---|---|---|
| ಪೂರ್ವಾಹ್ನ | 8-30 ಗಂಟೆಗೆ | ಸ್ಪರ್ಧಾಳುಗಳ ನೊಂದಣಿ |
| | 9-00 ಗಂಟೆಗೆ | ಉದ್ಘಾಟನೆ |
| | 9-15 ಗಂಟೆಗೆ | ಆಟೋಟ ಸ್ಪರ್ಧೆಗಳು / ಕ್ರಿಕೆಟ್ ( ವಿಶೇಷವಾಗಿ ಮಹಿಳೆಯರು ಹಾಗೂ 50 ವರ್ಷ ಮೇಲ್ಪಟ್ಟ ಪುರುಷರ ಜಂಟಿ ಕ್ರಿಕೆಟ್) |
| | 12.00 ಗಂಟೆಗೆ | ಕ್ರಿಕೆಟ್ ಎಲ್ಲರಿಗೂ (ಪುರುಷರಿಗೆ) |
| ಅಪರಾಹ್ನ | 1.00 ಗಂಟೆಗೆ | ಭೋಜನ (ಸೌಜನ್ಯ : ಶ್ರೀ ಯು.ವಿ. ಕೃಷ್ಣಮೂರ್ತಿ, ಮಾಲೀಕರು, ಹೋಟೆಲ್ ಅನ್ನಪೂರ್ಣ) |
| | 2.00 ಗಂಟೆಗೆ | ಕ್ರಿಕೆಟ್ / ಆಟೋಟ ಸ್ಪರ್ಧೆಗಳು |
| ಸಂಜೆ | 4.00 ಗಂಟೆಗೆ | ಚಹಾ ವಿರಾಮ |
| | 4.30 ಗಂಟೆಗೆ | ಮನೋರಂಜನಾ ಆಟೋಟಗಳು |



## ಕ್ರೀಡಾ ಸ್ಪರ್ಧೆಗಳು

| ಪುರುಷರಿಗೆ | ಮಹಿಳೆಯರಿಗೆ | ಮಕ್ಕಳಿಗೆ |
|---|---|---|
| 1) ಕ್ರಿಕೆಟ್ (12 ವರ್ಷ ಮೇಲ್ಪಟ್ಟವರಿಗೆ) | 1) ತ್ರೋಬಾಲ್ | 1) 100 ಮೀ. ಓಟ (10-16 ವರ್ಷ) |
| 2) ವಾಲಿಬಾಲ್ | 2) 100 ಮೀ. ಓಟ | 2) 50 ಮೀ. ಓಟ (5-10 ವರ್ಷ) |
| 3) 100 ಮೀ. ಓಟ | 3) ತ್ರೋಬಾಲ್ ಎಸೆತ | 3) ವಿಕೆಟ್‌ಗೆ ಚೆಂಡು ಎಸೆತ (5-10 ವರ್ಷ) |
| 4) ಶಾಟ್‌ಪುಟ್ ಎಸೆತ | 4) ನಡಿಗೆಯ ಓಟ (40 ವರ್ಷ ಮೇಲ್ಪಟ್ಟವರಿಗೆ) | 4) ವಾಲಿಬಾಲ್ ಎಸೆತ (10-16 ವರ್ಷ) |
| 5) ನಡಿಗೆಯ ಓಟ (40 ವರ್ಷ ಮೇಲ್ಪಟ್ಟವರಿಗೆ) | 5) ಕ್ರಿಕೆಟ್ | 5) ಲೆಮನ್ ಅಂಡ್ ಸ್ಪೂನ್ |
| 6) ಲಗೋರಿ | 6) ಲೆಮನ್ ಅಂಡ್ ಸ್ಪೂನ್ | 6) ಪುಸ್ತಕದ ಓಟ |
| 7) ಹಗ್ಗ ಜಗ್ಗಾಟ | 7) ಹಗ್ಗ ಜಗ್ಗಾಟ | |
| | 8) ಸಂಗೀತ ಕುರ್ಚಿ | |

ವಿ. ಸೂ.: 1) ಮೇಲೆ ತಿಳಿಸಿದ ಸ್ಪರ್ಧೆಗಳಲ್ಲದೆ ಸಂದರ್ಭಾನುಸಾರವಾಗಿ ಕೆಲವೊಂದು ಹೆಚ್ಚಿನ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು.
2) ಕ್ರಿಕೆಟ್ ಆಟ ಆಡಲು ಬಯಸುವ ಮಹಿಳೆಯರು ತಮಗೆ ಅನುಕೂಲಕರವಾದ ಉಡುಗೆಯಲ್ಲಿ ಬರುವುದು ಉತ್ತಮ
3) ಬೆಳಿಗ್ಗೆ 9.15 ಘಂಟೆಗೆ ಕ್ರಿಕೆಟ್ ಪಂದ್ಯ ಆರಂಭವಾಗಲಿದೆ.
4) ಹೆಚ್ಚಿನ ವಿವರಗಳಿಗೆ : ಎಂ.ಕೆ. ಪ್ರಸಾದ್ (98450 18183), ಮಾಧವಿ ಬಲ್ಲಾಳ್ (99860 39107)
ಎಂ. ಕೆ. ಗುರುಮೂರ್ತಿ – 9844022692 ಸಂದೀಪ್ – 98450 98150 ರವರನ್ನು ಸಂಪರ್ಕಿಸಿ

## ಅಕ್ಟೋಬರ್ 18 – ಜನವರಿ 2019ರ ವಿಶೇಷ ದಿನಗಳು

ಅಕ್ಟೋಬರ್ 24, ಬುಧ – ಹುಣ್ಣಿಮೆ, ವಾಲ್ಮೀಕಿ ಜಯಂತಿ

ನವೆಂಬರ್ 4, ಭಾನುವಾರ – ವೈಷ್ಣವೈಕಾದಶೀ / ಆನಂದಬಳಗದ ಎ.ಪಿ.ಎಲ್ 2018

ನವೆಂಬರ್ 5, ಸೋಮ – ಸಾಯಂ: ಜಲಪೂರಣ

ನವೆಂಬರ್ 6, ಮಂಗಳ – ನರಕ ಚತುರ್ದಶೀ

ನವೆಂಬರ್ 7, ಬುಧವಾರ – ಅಮಾವಾಸ್ಯೆ, ಬಲೀಂದ್ರ ಪೂಜಾ

ನವೆಂಬರ್ 8, ಗುರುವಾರ – ಬಲಿಪಾಡ್ಯಮಿ, ಕಾರ್ತಿಕ ಮಾಸಾರಂಭ

ನವೆಂಬರ್ 16, ಶುಕ್ರವಾರ – ವೃಶ್ಚಿಕ ಸಂಕ್ರಮಣ

ನವೆಂಬರ್ 18, ಭಾನುವಾರ – ತುಳಸೀ ಸಂಕೀರ್ತನೆ

ನವೆಂಬರ್ 19, ಸೋಮ – ಸರ್ವೈಕಾದಶೀ

ನವೆಂಬರ್ 20, ಮಂಗಳ – ಉತ್ಥಾನ ದ್ವಾದಶೀ

ನವೆಂಬರ್ 23, ಶುಕ್ರವಾರ – ಹುಣ್ಣಿಮೆ

ನವೆಂಬರ್ 26, ಸೋಮ – ಕನಕದಾಸ ಜಯಂತಿ

ದಿಶೆಂಬರ್ 3, ಸೋಮ – ಸರ್ವೈಕಾದಶೀ

ದಿಶೆಂಬರ್ 5, ಬುಧವಾರ – ಧನ್ವಂತರೀ ಜಯಂತಿ

ದಿಶೆಂಬರ್ 7, ಶುಕ್ರವಾರ – ಅಮಾವಾಸ್ಯೆ

ದಿಶೆಂಬರ್ 8, ಶನಿವಾರ – ಮಾರ್ಗಶಿರ ಮಾಸ, ಹೇಮಂತ ಋತು ಆರಂಭ

ದಿಶೆಂಬರ್ 13, ಗುರು – ಸುಬ್ರಮಣ್ಯ ಷಷ್ಠೀ

ದಿಶೆಂಬರ್ 16, ಭಾನು – ಧನು ಸಂಕ್ರಮಣ

ದಿಶೆಂಬರ್ 19, ಬುಧ – ವೈಷ್ಣವೈಕಾದಶೀ / ಗೀತಾ ಜಯಂತಿ

ದಿಶೆಂಬರ್ 20, ಗುರು – ಮುಕ್ಕೋಟಿ ದ್ವಾದಶೀ

ದಿಶೆಂಬರ್ 22, ಶನಿವಾರ – ಹುಣ್ಣಿಮೆ

ದಿಶೆಂಬರ್ 25, ಮಂಗಳ – ಬಳಗದ ಪ್ರವಾಸ

ಜನವರಿ 1, 2019 ಮಂಗಳ – ಸರ್ವೈಕಾದಶೀ, ಹೊಸ ಇಸವಿ ಪ್ರಾರಂಭ


ಜನವರಿ 6, ಭಾನುವಾರ – ಎಳ್ಳಮಾವಾಸ್ಯೆ ಆನಂದಮಿಲನ 2019

ಜನವರಿ 7, ಸೋಮವಾರ – ಪುಷ್ಯಮಾಸಾರಂಭ

ಜನವರಿ 14, ಸೋಮವಾರ – ಮಕರ ಸಂಕ್ರಮಣ

ಜನವರಿ 15, ಮಂಗಳವಾರ – ಸಾರ ಮಧ್ವನವಮೀ

**(ಆಧಾರ : ಪರ್ಯಾಯ ಶ್ರೀ ಪೂರ್ಣಪ್ರಜ್ಞ ಪಂಚಾಗಂ)**



## ಸಾಮೂಹಿಕ ತುಳಸಿ ಸಂಕೀರ್ತನೆ : 17.11.2018

ಆನಂದ ಬಳಗದ ಧಾರ್ಮಿಕ ವಿಭಾಗದ ನೇತೃತ್ವದಲ್ಲಿ

**ದಿನಾಂಕ 17.11.2018ರ ಶನಿವಾರ ಸಂಜೆ 5** ರಿಂದ

**ಸಾಮೂಹಿಕ ತುಳಸಿ ಸಂಕೀರ್ತನೆ** ಯನ್ನು

ಸಂಯೋಜಿಸಲಾಗಿದೆ.

ಬೆಂಗಳೂರು ನಗರದ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿ ರಸ್ತೆಯಲ್ಲಿರುವ ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದ ಸಹಯೋಗದಲ್ಲಿ ವಿದ್ಯಾಪೀಠದ ಶ್ರೀಕೃಷ್ಣನ ಸನ್ನಿಧಿಯಲ್ಲಿ ನಡೆಯಲಿರುವ ಈ ಅಪರೂಪದ ಕಾರ್ಯಕ್ರಮದಲ್ಲಿ ಬಳಗದ ಸದಸ್ಯರು, ತೌಳವ ಮಧ್ವ ಒಕ್ಕೂಟದ ಸದಸ್ಯರು ಹಾಗೂ ವಿದ್ಯಾಪೀಠದ ವಿದ್ಯಾರ್ಥಿಗಳು ಅಮೋಘವಾದ ಶೈಲಿಯಲ್ಲಿ ತುಳಸೀ ಸಂಕೀರ್ತನೆ ಮಾಡಲಿದ್ದಾರೆ.

ದೀಪಾವಳಿ ಆಚರಣೆಯ ಅಂಗವಾಗಿ ದಶಮಿಯ ಸಾಯಂಕಾಲ ಹಮ್ಮಿಕೊಂಡಿರುವ ಸಂಕೀರ್ತನೆಯಲ್ಲಿ ಬಳಗದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿ ವಿನಂತಿ. (ಮಹಾಮಂಗಳಾರತಿ ನಂತರ ವಿಶೇಷ ಫಲಾಹಾರದ ವ್ಯವಸ್ಥೆಯನ್ನು ಮಾಡಲಾಗಿದೆ)

**ಶ್ರೀಮತಿ ಗೀತಾ ವಾಸುದೇವರಾವ್**
ಅಧ್ಯಕ್ಷರು

**ಶ್ರೀ ಎಸ್. ಹರಿದಾಸ ಉಪಾಧ್ಯ**
ಕಾರ್ಯದರ್ಶಿ
94480 01892

**ಶ್ರೀ ವೈ. ಜಯಂತ ರಾವ್**
ಸಂಚಾಲಕರು, ಧಾರ್ಮಿಕ ವಿಭಾಗ,
94482 74519

# ವಿಜೃಂಭಣೆಯ ಗಣೇಶೋತ್ಸವ

16-9-2018ನೇ ಭಾನುವಾರ, ಬನ್ನೇರುಘಟ್ಟ ಆನಂದ ಸಭಾಂಗಣದಲ್ಲಿ ಯುವ ಸದಸ್ಯರಿಂದ ಗಣೇಶೋತ್ಸವ ಆಯೋಜಿಸಲ್ಪಟ್ಟಿದೆ.

ಅಂದು ಬೆಳಗ್ಗೆ 9-30 ಗಂಟೆಗೆ, ವಿದ್ವಾನ್ ಶ್ರೀ ವಿಷ್ಣುಮೂರ್ತಿ ಸರಳಾಯರ ಪೌರೋಹಿತ್ಯದಲ್ಲಿ, ಆನಂದ ಸಭಾಂಗಣದ ಆವರಣದಲ್ಲಿರುವ ಶ್ರೀ ಶಕ್ತಿ ಗಣಪತಿ ದೇವರ ಸನ್ನಿಧಿಯಲ್ಲಿ, ಬಳಗದವತಿಯಿಂದ ಆಚಾರ್ಯ ಮುಖೇನ ನಡೆಯುವ ಗಣಹೋಮ, ಮೂರ್ತಿ ಪೂಜೆ ಮತ್ತು ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಿರ್ವಿಘ್ನವಾಗಿ ನಡೆಯಲೆಂದು ವಿಘ್ನೇಶ್ವರನಲ್ಲಿ ಪ್ರಾರ್ಥಿಸಿದರು. ನಂತರ ಉತ್ಸಾಹಭರಿತ, ಯುವ ಪೀಳಿಗೆಯಲ್ಲಿ ಒಬ್ಬರಾಗಿ, ನಾಯಕತ್ವ ಗುಣದಿಂದ ಸ್ವಯಂಪ್ರೇರಿತ ಮುಂದಾಳತ್ವ ವಹಿಸಿ, ಅಂದಿನ ಗಣಹೋಮ ಸಂಕಲ್ಪಮಾಡಬೇಕಿದ್ದ ಶ್ರೀ ಎಂ.ಕೆ. ಪ್ರಸಾದ್ ಮತ್ತು ಶ್ರೀಮತಿ ನಿವೇದಿತ ಪ್ರಸಾದ್ ಅವರು ಕಾರಣಾಂತರದಿಂದ ಮಾಡಲಾಗದಿದ್ದುದರಿಂದ, ಈ ಸೌಭಾಗ್ಯ ಲಭಿಸಿತು. ಅವರ ಆತ್ಮೀಯರಾದ ಶ್ರೀ ದಿನೇಶ್ ದಂಪತಿಗಳಿಗೆ ಬಳಗದ ಎಲ್ಲರ ಪರವಾಗಿ ಹೋಮ ಸಂಕಲ್ಪ ಪಡೆಯಲು ಪ್ರಾರ್ಥನೆ ಸಲ್ಲಿಸಿ, ತಾಳ, ಮೇಳದೊಂದಿಗೆ ಹೊರಟ ದಿಬ್ಬಣ, 10-15 ಗಂಟೆಗೆ ಸದನ ಪ್ರವೇಶಿಸಿ, ಶ್ರೀ ಪಿ. ಜಯರಾಮ ಬಾಗಿಲ್ತಾಯ ಸಭಾಂಗಣದ ವೇದಿಕೆಯಮೇಲೆ ಕಂಗೊಳಿಸುವಂತೆ ಅಲಂಕಾರ ಭರಿತ ಮಂಟಪದಲ್ಲಿ ಪ್ರತಿಷ್ಠಾಪೂರ್ವಕವಾಗಿ ಇರಿಸಿದ್ದ ಗಣೇಶ ಮೂರ್ತಿ ಮತ್ತು ಮುಂಭಾಗದಲ್ಲಿ ನಿರ್ಮಿತವಾದ ಹವನ ಕುಂಡದ ನೆಲೆಯನ್ನು ತಲುಪಿತು.





ಶ್ರೀ ಸರಳಾಯರ ಆಚಾರ್ಯತ್ವದಲ್ಲಿ, ದಿನೇಶ್ ರಾವ್ ದಂಪತಿಗಳು, ನೆರೆದ ಹಿರಿಯರ ಉಪಸ್ಥಿತಿಯಲ್ಲಿ ಗಣ ಹೋಮ ಸಂಕಲ್ಪ ಪಡೆದು, ಮುಂದೆ 1-15 ಗಂಟೆ ನಿರಂತರವಾಗಿ, ಶಾಸ್ತ್ರೋಕ್ತವಾಗಿ ನಡೆದ ಎಲ್ಲಾ ಧಾರ್ಮಿಕ ವಿಧಿಗಳನ್ನು ಭಕ್ತಿ ಮತ್ತು ಶ್ರದ್ಧೆಯಿಂದ ಮಾಡಿ, ಧನ್ಯರಾಗಿ, ಬಳಗದ ಬಂಧುಗಳನ್ನು ಪುನೀತರನ್ನಾಗಿ ಮಾಡಿದರು.

ಈ ಹೋಮ ಕಾರ್ಯಗಳು ನಡೆಯುತ್ತಾ ಇರುವಾಗ, ಸಭಾ ಮಂಟಪದ ಕೆಳ ಹಾಸಿನ ಮೇಲೆ, 13 ಜೋಡಿ ಸುಮಂಗಳೆಯರು, ಗಣಪನ ವಿವಿಧ ಭಂಗಿಗಳ ವರ್ಣರಂಜಿತ ಚಿತ್ತಾರವನ್ನು ರಂಗೋಲಿಯಲ್ಲಿ ಬಿಡಿಸಿ, ಸಭಿಕರ ಮೆಚ್ಚುಗೆ ಪಡೆದರು. ಅದೇರೀತಿ 13 ಇತರೆ ಸದಸ್ಯರ ಕೈ ಚಳಕದಿಂದ ಬರೆದು, ತಯಾರಿಸಿದ ಸುಂದರ, ಮನ ರಂಜಿಸುವ ವಿವಿಧ ರೂಪದ ಗಣಪತಿಯ ಚೌಕಟ್ಟು ಚಿತ್ರವನ್ನು ಪ್ರದರ್ಶಿಸಲಾಯಿತು.

ಪೂರ್ಣಾಹುತಿಯೊಂದಿಗೆ ಹೋಮಕಾರ್ಯಗಳೆಲ್ಲಾ ಮುಗಿದಮೇಲೆ, ಪ್ರತಿಷ್ಠಾಪಿತ ಗಣಪತಿ ವಿಗ್ರಹಕ್ಕೆ ಶಕ್ತಿ ಆವಾಹನೆ ಮತ್ತು ಪೂಜಾ ಕಾರ್ಯಗಳು ಆರಂಭ ಆಗುತ್ತಿದ್ದಹಾಗೆ, ವೇದಿಕೆಯ ಮೇಲೆ ಯುವ ಸದಸ್ಯರ ಮುಂದಾಳತ್ವದಲ್ಲಿ, ನೆರೆದ ಸಭಿಕರಿಗೆ ಪೂರ್ವಭಾವಿಯಾಗಿ ವಿತರಿಸಿದ ವಿಷ್ಣು ಸಹಸ್ರ ನಾಮ ಕಿರು ಹೊತ್ತಿಗೆ ಪಠಣದಿಂದ ಹೊರಟ ಘಂಟಾಘೋಷ ಸಾಮೂಹಿಕ ಧ್ವನಿ ತರಂಗಗಳ ನಾದ ಎಂತಹಾ ನಾಸ್ತಿಕರನ್ನೂ ಮಂತ್ರ ಮುಗ್ಧರನ್ನಾಗಿ ಮಾಡಿಸುವಂತಿತ್ತು.

ಈ ಕಾರ್ಯಕ್ರಮದ ನಂತರ ಅದೇ ವೇದಿಕೆ ಮೇಲೆ ಶ್ರೀಮತಿ ಮಾಲಿನಿ ರಾವ್ ಅವರ ವೃಂದ, ಶ್ರೀ ಗುರು ನಂದನ ಅವರ ಮೃದಂಗ ಸಾಥಿಯೊಂದಿಗೆ ತಾಳ, ಲಯ ಬದ್ಧವಾಗಿ ಹಾಡಿದ ದಾಸರ ಪದ ಮತ್ತು ಭಕ್ತಿ ಗೀತೆಗಳ ಸುಶ್ರಾವ್ಯದ ಇಂಪು ಸಭೆಯಲ್ಲಿ ಕುಳಿತು ಆಸ್ವಾದಿಸಿ ಆನಂದಿಸಿದವರಿಗೇ ಗೊತ್ತು.

ನಂತರ, ಗಣಪನಿಗೆ ಮಹಾಮಂಗಳಾರತಿ. ವೇದಿಕೆಗೆ ಆಗಮಿಸಿದ ಬಳಗದ ಅಧ್ಯಕ್ಷರಾದ ಶ್ರೀಮತಿ ಗೀತಾ ವಾಸುದೇವರಾವ್ ಮತ್ತು ಇತರ ಹಿರಿಯರು, ಬಳಗದ ಬಂಧುಗಳ ಜೊತೆಗೂಡಿ, ಆರತಿ, ತೀರ್ಥ, ಪ್ರಸಾದ ಸ್ವೀಕರಿಸಿ, ಸಭೆಯ ಘನತೆ ಮತ್ತು ಗೌರವಕ್ಕೆ ಪಾತ್ರರಾದರು.

ತದನಂತರ ನಡೆದ, ಯುವ ಬಳಗದವರಿಂದ, ಸುಸಜ್ಜಿತ, ಸೌಜನ್ಯಭರಿತ ಉಪಚಾರದಿಂದ ಕೂಡಿದ ಶುಚಿ, ಸ್ವಾದಿಷ್ಟ ಭರಿತ ಸಹ ಭೋಜನದ ನಡುವೆ, ಧರೆಗಿಳಿದು ಬಂದ ಗಣಪನ ತರಹ ವೇಷಧಾರಿಯಾಗಿ ಭಾಜಾ, ಭಜಂತ್ರಿಯೊಡನೆ ಪಂಕ್ತಿಯಲ್ಲಿ ಪ್ರವೇಶಿಸಿ, ಪ್ರತಿ ಬಂಧುಗಳಿಗೂ ದಕ್ಷಿಣಾ ಪ್ರದಾನ ಮಾಡಿ ಶುಭ ಕೋರಿ ಸಾಗಿದ ಶ್ರೀ ಮಧುಸೂದನ ಕಾವೂರು ರವರ ಈ ಹೊಸ ಪ್ರಯೋಗ ಪ್ರಶಂಸಾರ್ಹವಾಗಿತ್ತು.

ಭೋಜನಾನಂತರ ಸಂತೃಪ್ತ ಸದಸ್ಯರು ಮತ್ತೆ ಸಭಾಂಗಣದಲ್ಲಿ ಕಲೆತು, ಪರಸ್ಪರ ಪರಿಚಯ, ಕುಶಲೋಪರಿ, ಸಂತೋಷ ಸಂಭಾಷಣೆಯ ನಂತರ ಗಣೇಶ ಮೂರ್ತಿಯ ವಿಸರ್ಜನೆ ಸಂಭ್ರಮ.

ಸುಮಾರು ಅಪರಾಹ್ನ 2–30 ಗಂಟೆ ಸಮಯದಲ್ಲಿ ಗಣಪತಿಯ ಮೂರ್ತಿಯನ್ನು ವೇದಿಕೆಯಿಂದ ಕೆಳಗಿಳಿಸಿ, ಮೆರವಣಿಗೆಯಲ್ಲಿ ಕೊಂಡೊಯ್ದು ಆವರಣದಲ್ಲಿ ಇರುವ ಕೂಪದ ಜಲದಲ್ಲಿ ವಿಸರ್ಜಿಸಿದ ಬಗೆ ಇನ್ನೊಂದು ಅವಿಸ್ಮರಣೀಯ ದೃಶ್ಯ.

ನಾದ ತರಂಗಿಣಿ ಗೋಪಾಲ ಕೃಷ್ಣ ಕುಂಜಿತ್ತಾಯ ಮತ್ತವರ ಸಮೂಹದವರ ಚಂಡೆ ವಾದನ ಬೆಳಗ್ಗಿನಿಂದ ಕಾಲ ಕಾಲಕ್ಕೆ ಕೇಳಿದ್ದರೂ, ಅವರ ಕೈ ಚಳಕದ ಪರಕಾಷ್ಠೆ ಪ್ರದರ್ಶನ ಮತ್ತು ಆವೇಶ, ಮೆರವಣಿಗೆಯ ಸಂದರ್ಭದಲ್ಲಿ ಉತ್ತುಂಗಕ್ಕೆ ಏರಿ, ವಯೋವೃದ್ಧರೆನ್ನದೆ, ಕುಣಿಯಲು ಬಾರದವರೂ ಸಹ, ವೇಷಧಾರಿ ಗಣಪತಿ ಜೊತೆಗೂಡಿ, ಪ್ರತಿಯೊಬ್ಬರು, ನಿಂತಲ್ಲೆ, ನಡೆದಲ್ಲೆ, ಮನದಲ್ಲೆ ಕುಣಿಯುವ ಹಾಗೆ ಮಾಡಿದ ಪರಿ ಅವರ್ಣನೀಯ.



ಆವರಣದ ಬಾವಿಯ ನೀರಿನಲ್ಲಿ ಗಣಪನ ಬೀಳ್ಕೊಡಿಗೆಯ ನಂತರ ಎಲ್ಲರೂ ಪರಸ್ಪರ ಶುಭಕೋರಿ, ಸಂತೋಷದಲ್ಲಿ ಮುಂದಿನ ವರುಷ ಮತ್ತೆ ಮೇಳೈಸುವ ಭರವಸೆಯೊಂದಿಗೆ ಸ್ವಸ್ಥಾನಕ್ಕೆ ನಿರ್ಗಮಿಸಿದರು.

ಈ ಎಲ್ಲಾ ಕಾರ್ಯಕ್ರಮಗಳ ಪ್ರಮುಖ ಘಟನೆಗಳನ್ನು ಬೆಳಗಿನಿಂದ ಸಂಜೆವರೆಗೆ, ಬೇಸರವಿಲ್ಲದೆ ಹಸನ್ಮುಖರಾಗಿ ಸೆರೆ ಹಿಡಿಯುತ್ತಿದ್ದ ಛಾಯಾಗ್ರಹಕರ ಸ್ಥಾನದಲ್ಲಿದ್ದ ಶ್ರೀ ಬಾಲಕೃಷ್ಣ ಉಪಾಧ್ಯಾಯರ ಮುಖದಲ್ಲಿ ಧನ್ಯತಾಭಾವವಿತ್ತು.

ಯುವ ಆನಂದ ಬಳಗದವರಿಂದ ಎಲ್ಲರ ಸಹಕಾರ, ಸೌಹಾರ್ದದೊಂದಿಗೆ ಯಶಸ್ವಿಯಾಗಿ, ಶ್ಲಾಘನೀಯವಾಗಿ ನಿಯೋಜಿಸಿದ ಈ ಚಿಕ್ಕ, ಚೊಕ್ಕ, ಸುಸಜ್ಜಿತ ಸುಂದರ ಕಾರ್ಯಕ್ರಮ 3–15 ಗಂಟೆಗೆ ಮುಕ್ತಾಯವಾಯಿತು.


**ಡಾ. ಶಂಕರನಾರಾಯಣ ರಾವ್**

# ಎಪಿಎಲ್ 2018 : ಎಂಟು ತಂಡಗಳು

| ಕ್ರ.ಸಂ. | ತಂಡದ ಬ್ರಾಂಡ್ ನೇಮ್ | ಪ್ರಾಯೋಜಕರು | ಐಕಾನ್ ಆಟಗಾರರು |
|---|---|---|---|
| 1. | ಐತಾಳ್ ಏಸಸ್ | ಶ್ರೀಮತಿ ಕಸ್ತೂರಿ ಐತಾಳ್ | ಶರತ್ ಅಡಿಗ |
| 2. | ಬಾಗಿಲ್ತಾಯ ಬ್ರಿಗೇಡ್ಸ್ | ಶ್ರೀ ಪಿ.ಎಸ್. ಬಾಗಿಲ್ತಾಯ | ಭರತ್ ಅಡಿಗ |
| 3. | ಐಡಿಯಲ್ ಪಂಟರ್ಸ್ | ಶ್ರೀ ಪಿ.ಸಿ. ರಾವ್ | ವೈಶಾಖ್ ಭಾರ್ಗವ್ |
| 4. | ಮುಂಡ್ರುಪಾಡಿ ಸ್ಟಾಲ್‌ವಾರ್ಟ್ಸ್ | ಶ್ರೀ ಮೋಹನ್ ರಾವ್ .ಎಂ | ದೇವಿ ಪ್ರಸಾದ್ |
| 5. | ಆರ್.ಎಸ್. ವಾರಿಯರ್ಸ್ | ಶ್ರೀ ವೈ. ರಾಧಾಕೃಷ್ಣ | ದರ್ಶನ್‌ಕುಮಾರ್ |
| 6. | ರಾಯಲ್ ಅಡಿಗಳ್ಸ್ | ಶ್ರೀ ಮನೋಹರ ಅಡಿಗಳ್ | ವೇದವ್ಯಾಸ |
| 7. | ಸ್ಟೀಲ್ ಸ್ಟಾರ್ಸ್ | ಶ್ರೀ ಎಂ. ಭಾಸ್ಕರರಾವ್ | ಸಂತೋಷ್ ಹೆಬ್ಬಾರ್ |
| 8. | ಉಪಾಧ್ಯ ಯೂನಿಕಾರ್ನ್ಸ್ | ಶ್ರೀ ಬಿ. ರಾಮಚಂದ್ರ ಉಪಾಧ್ಯ | ಸಂದೀಪ್ ರಾವ್ |

# ಮಕ್ಕಳ ಪ್ರತಿಭಾ ಮೇಳ ಮತ್ತು ಪುರಸ್ಕಾರ

"ಮಮ ರಾಜ್ಯಂ.... ಮಮೇಚ್ಛಾ! ಮಾಂ ಪ್ರುಷ್ಟುಂ ತ್ವಂ ಕಃ?" ರೀ... ಏನದು ಕನವರಿಸಿಕೊಳ್ಳುತ್ತಾ ಇದ್ದೀರಾ? ಎಚ್ಚರ ಮಾಡಿಕೊಳ್ಳಿ: ಏಳಿ....! ಪತ್ನಿ ಮೈ ಅಲುಗಾಡಿಸಿ ಎಚ್ಚರಿಸಿದಂತಾಯಿತು. ಎದ್ದು ಕಣ್ಣು ಬಿಟ್ಟು ಏನಾಯಿತು ಎಂದೆ ! ಏನೋ ಕನಸಿನಲ್ಲಿ ಸಂಸ್ಕೃತ ಮಾತಾಡ್ತಾ ಇದ್ದಂಗೆ ಕೇಳ್ಸು. ಜೋರು ಜೋರಾಗಿ ಮಾತಾಡ್ತಾ ಇದ್ರಿ ಅದ್ಕೇ ಎಬ್ಬಿಸಿದೆ ಎಂದಳು. ನನಗೆ ನಗು ಬಂತು. ಅವ್ಳೂ ನಕ್ಕಳು. ಮಕ್ಕಳ ಪ್ರತಿಭಾ ಮೇಳದ ಸಂಸ್ಕೃತ ನಾಟಕದ ಪ್ರಾಕ್ಟೀಸ್‌ನ ಗುಂಗು ಕನಸಿನಾಳಕ್ಕೂ ಇಳಿದಿತ್ತು.



ಹೌದು ಆನಂದಬಳಗದ ಮಕ್ಕಳ ಪ್ರತಿಭಾಮೇಳ ಬಂತೆಂದರೆ ಹಾಗೇ. ಹಗಲು ರಾತ್ರಿ ಎಂದಿಲ್ಲ. 24 ಘಂಟೆಯೂ ಅದೇ ಗುಂಗು. ಅದೂ ಈ ಬಾರಿ ಅದು ಆಗಸ್ಟ್ 15 ರಂದು ಇದ್ದುದರಿಂದ ಅದಕ್ಕೊಂದು ಹೊಸಕಳೆ ಬಂದಿತ್ತು. ದಿನದ ವಿಶೇಷತೆಗೆ ತಕ್ಕಂತೆ ಎಲ್ಲಾ ಮನರಂಜನೆ ಕಾರ್ಯಕ್ರಮಗಳನ್ನೂ ತಯಾರಿಸಿ ಪ್ರದರ್ಶಿಸಿದ್ದೆವು. ಅಂತೆಯೇ ಅದು ಜನರ ಮೆಚ್ಚುಗೆಯನ್ನು ಪಡೆಯಿತು. "ಕಾಲಚಕ್ರದಲ್ಲಿ ಭಾರತ" ಎಂಬ ಶೀರ್ಷಿಕೆಯ ಸುತ್ತ ಹೆಣೆದ ಈ ಕಾರ್ಯಕ್ರಮದ ಪ್ರತಿಯೊಂದು ಅಂಗಗಳಲ್ಲಿಯೂ ಭಾರತದ ಸಂಸ್ಕೃತಿ, ಪರಂಪರೆ, ಹಿರಿತನಗಳ ಹಲವು ಅಂಶಗಳನ್ನು ಪ್ರದರ್ಶಿಸುವ ಪ್ರಯತ್ನ ನಮ್ಮದಾಗಿತ್ತು.

ಕಾರ್ಯಕ್ರಮದ ಪ್ರಾರಂಭವನ್ನೇ ಭಾರತಮಾತೆಗೆ ನಮಿಸುವ ಪ್ರಾರ್ಥನೆಯೊಂದಿಗೆ ಮಾಡಿ, ಸಭಿಕರನ್ನು ರಂಜಿಸಿದ ಬಳಗದ ಪುಟ್ಟ ಹಾಡುಹಕ್ಕಿಗಳು ಎಲ್ಲರಿಂದ ಭೇಷ್ ಎನಿಸಿಕೊಂಡರು. ಮುಂದೆ ಕಾಲಚಕ್ರದ ಪ್ರಮುಖ ಭಾಗಗಳಾದ ಶಿಲಾಯುಗ, ಲೋಹಯುಗ, ವೇದಕಾಲ, ಹಲವು ರಾಜಮಹಾರಾಜರುಗಳಾಳಿದ ಚರಿತ್ರಾಯುಗ, ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಕಾಲಗಳ ವಿಶೇಷತೆಗಳನ್ನು ಬಿಂಬಿಸುವ ನೃತ್ಯ ನಾಟಕಗಳು ಈ ಬಾರಿಯ ವಿಶೇಷತೆಯಾಗಿದ್ದವು.

ಗುರು ಉದಯಕೃಷ್ಣ ಹಾಗೂ ಅನುರಾಧಾ ದಂಪತಿಗಳ ನಿರ್ದೇಶನ ಹಾಗೂ ತರಬೇತಿಯಲ್ಲಿ ಮೂಡಿಬಂದ ಪ್ರಾರ್ಥನಾ ನೃತ್ಯ ಎಂದಿನಂತೆ ತನ್ನ ಗುಣಮಟ್ಟ ಹಾಗೂ ಕಲಾವಂತಿಕೆಯನ್ನು ಪ್ರದರ್ಶಿಸಲು ಯಶಸ್ವಿಯಾದರೆ ಗುರು ವಿನಯ್ ಜನಾರ್ದನ್ ಅವರ ನಿರ್ದೇಶನ ಮತ್ತು ತರಬೇತಿಯಲ್ಲಿ ಮೂಡಿ ಬಂದ ಉಳಿದೆಲ್ಲಾ ನೃತ್ಯಗಳು ಸಭಿಕರನ್ನು ರಂಜಿಸುವಲ್ಲಿ ಹಾಗೂ ಆಯಾ ಕಾಲಮಾನದ ಲಕ್ಷಣ ಹಾಗೂ ವೈಶಿಷ್ಟ್ಯಗಳನ್ನು ಬಿಂಬಿಸುವುದರಲ್ಲಿ ಯಶಸ್ವಿಯಾದವು. ವೇದಕಾಲವನ್ನು ಬಿಂಬಿಸುವ ಸಲುವಾಗಿ ಪ್ರದರ್ಶಿಸಿದ ಸಂಸ್ಕೃತ ನಾಟಕ "ಪರಶುರಾಮ" ಅದಮ್ಯ ಆಸೆ ಮತ್ತು ಹುಚ್ಚು ಧೈರ್ಯದಿಂದ ಮಾಡಿದ ಪ್ರಯೋಗವಾದರೂ ಪ್ರತಿಭಾವಂತ ಮಕ್ಕಳ ನಿರ್ಭೀತಿಯ ಸಂಭಾಷಣೆ ಸಮರ್ಥ ಅಭಿನಯ ಸೂಕ್ತ ರಂಗ ಸಜ್ಜಿಕೆ ಮತ್ತು ಹಿನ್ನೆಲೆ ಸಂಗೀತ – ಎಲ್ಲರ ಪ್ರಶಂಸೆಗೆ ಪಾತ್ರವಾದುದೇ ಅದರ ಯಶಸ್ಸನ್ನು ಸಾರುತ್ತಿತ್ತು. ಸುಶ್ರಾವ್ಯ ಭಾವಗೀತೆಗಳ ಸರಣಿ ಗಾಯನ ಮತ್ತು ತಿಳಿಹಾಸ್ಯದ ಏಕಪಾತ್ರಾಭಿನಯ ಕಾರ್ಯಕ್ರಮಗಳ ವಿಭಿನ್ನತೆಯನ್ನು ಹೆಚ್ಚಿಸಲು ಸಹಾಯಕವಾದವು. ಅತ್ಯಾಕರ್ಷಕ ವೇಷಭೂಷಣಗಳನ್ನು ಒದಗಿಸಿ ಕಾರ್ಯಕ್ರಮದ ಮೆರುಗು ಹೆಚ್ಚಿಸಿದ ಗೌರವ "ಪೋಷಾಕ್ ಕಾಸ್ಟ್ಯೂಮ್ಸ್"ನ





ಮಾಲಿಕರಾದ ನಮ್ಮ ಬಳಗದ ಶ್ರೀಮತಿ ದೇವಿಪ್ರಿಯ ಅವರಿಗೆ ಸಂದರೆ ಇಡೀ ಕಾರ್ಯಕ್ರಮದ ನಿರೂಪಣೆಯನ್ನು ಅತೀ ಸಮರ್ಥ ಹಾಗೂ ಅರ್ಥಪೂರ್ಣವಾಗಿ ನಿಭಾಯಿಸಿದ ಹಿರಿಮೆ ಕುಮಾರಿ ಶಾರ್ವರಿ ಸೋಮಯಾಜಿಗೆ ಸಲ್ಲಬೇಕು. ಎಲ್ಲರೂ ಗಮನಿಸಿ ಪ್ರಶಂಶಿಸಿದ ಇನ್ನೊಂದು ಅಂಶವೆಂದರೆ ಹಿನ್ನೆಲೆಯಲ್ಲಿ ಅತ್ಯದ್ಭುತವಾಗಿ ಪ್ರದರ್ಶಿಸಿದ ಧ್ವನಿ ಹಾಗೂ ದೃಶ್ಯ ವೈವಿಧ್ಯ. ಪ್ರತಿಯೊಂದು ಪ್ರದರ್ಶನಕ್ಕೂ ಪೂರಕವಾದ ಹಾಗೂ ಆಕರ್ಶಕವಾಗಿರುವ ಹಿನ್ನೆಲೆಯ ದೃಶ್ಯ ವೈಭವವನ್ನು ಸಿದ್ಧಪಡಿಸಿ ಪ್ರದರ್ಶಿಸಿದ ಶ್ರೀಯುತ ರಂಜಿತ್ ಯಡಪಡಿತ್ತಾಯ ಹಾಗೂ ರಾಜೇಶ್ ಅವರ ಕೌಶಲ್ಯ ಹಾಗೂ ಪರಿಶ್ರಮವನ್ನು ಎಲ್ಲರೂ ಮೆಚ್ಚಲೇಬೇಕು.

ಮನರಂಜನೆ ಕಾರ್ಯಕ್ರಮದ ಮೊದಲಿಗೆ ಸಭಾ ಕಾರ್ಯಕಮವಿದ್ದು ಅಂದಿನ ಮುಖ್ಯ ಅತಿಥಿಗಳಾಗಿ ನಾಡಿನ ಹೆಸರಾಂತ ಸಂಗೀತ ನಿರ್ದೇಶಕ ಹಾಗೂ ಗಾಯಕ ಶ್ರೀ ಉಪಾಸನಾ ಮೋಹನ್ ಅವರು ಆಗಮಿಸಿದ್ದು ತನ್ನ ಚುಟುಕಾದ ಭಾಷಣದಲ್ಲಿ ಬಳಗವನ್ನು ಅಭಿನಂದಿಸಿದ್ದಲ್ಲದೇ ಅದರ ಜೊತೆಗಿನ ತನ್ನ ಪರೋಕ್ಷ ಸಂಬಂಧಗಳನ್ನು ತಿಳಿಸಿ ಅಭಿಮಾನಪಟ್ಟರು. ಪ್ರಾರಂಭದಲ್ಲಿ ಎಲ್ಲರ ಸ್ವಾಗತವನ್ನು ಮಾ. ಶಾಶ್ವತ್ ಆರ್.ಕೆ. ಮಾಡಿದರೆ, ಮುಖ್ಯ ಅತಿಥಿಗಳ ಪರಿಚಯವನ್ನು ಕುಮಾರಿ ಪೂರ್ವಿ ಭಟ್ ಮಾಡಿದಳು. ಸಭಾ ಕಾರ್ಯಕ್ರಮದ ನಿರೂಪಣೆಯನ್ನು ಕುಮಾರಿ ಅನುಷಾ ಸಮರ್ಥವಾಗಿ ನೆರವೇರಿಸಿದರೆ. ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯನ್ನು ಕುಮಾರಿ ವರ್ಣಿಕಾ ಉಡುಪ ನೆರವೇರಿಸಿಕೊಟ್ಟಳು. **(ಬಹುಮಾನ ವಿಜೇತರ ಪಟ್ಟಿ ಪ್ರತ್ಯೇಕವಾಗಿ ನೀಡಲಾಗಿದೆ)** ಪ್ರತಿ ವರ್ಷದಂತೆ ಈ ಬಾರಿಯೂ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ 2ನೇ ವರ್ಷದಲ್ಲಿ ಅತೀ ಹೆಚ್ಚು ಅಂಕ ಗಳಿಸಿ ತೇರ್ಗಡೆಯಾದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಭೀಮಾ ಜ್ಯುವೆಲರ್ಸ್ ಅವರ ವತಿಯಿಂದ ಪುರಸ್ಕರಿಸಲಾಯಿತು. ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಳಗದ ಅಧ್ಯಕ್ಷೆಯಾದ ಶ್ರೀಮತಿ ಗೀತಾ ವಾಸುದೇವರಾವ್ ಅವರು ತಮ್ಮ ಭಾಷಣದಲ್ಲಿ ಆನಂದ ಬಳಗದ ಹಿರಿಮೆ, ಸಾಧನೆಗಳೊಂದಿಗೆ ಮುಂದಿನ ಗುರಿ ಹಾಗೂ ಜವಾಬ್ದಾರಿಗಳನ್ನು ತಿಳಿಸುತ್ತಾ ಬಳಗದ ಒಳಿತಿಗಾಗಿ ಪರಿಶ್ರಮಿಸುವ ಎಲ್ಲಾ ಸದಸ್ಯರುಗಳಿಗೂ ಮಕ್ಕಳಿಗೂ ತನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸಿದರು. ಸಭೆಯ ಕೊನೆಯಲ್ಲಿ ಕುಮಾರಿ ಮೇಘನಾಕಾರಂತ್ ಪ್ರಸ್ತುತಪಡಿಸಿದ ಕವನ ರೂಪದ ವಂದನಾರ್ಪಣೆ ಎಲ್ಲರ ಮನ ರಂಜಿಸಿತು. ಕವನ ರೂಪದ ವಂದನಾರ್ಪಣೆಯನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.



ನೋಡುನೋಡುತ್ತಾ ಸಂಭ್ರಮಿಸುತ್ತಿದ್ದಂತೆಯೇ ಮುಗಿದೇ ಹೋದ ಬರೀ ಮೂರು ತಾಸುಗಳ ಈ ಕಾರ್ಯಕ್ರಮದ ಹಿಂದೆ ನಾಲ್ಕು ತಿಂಗಳುಗಳ ದೊಡ್ಡ ಪರಿಶ್ರಮವಿದೆ. ಮಕ್ಕಳು, ಹೆತ್ತವರು, ನಿರ್ದೇಶಕರು, ಹಿರಿಯರು, ಗುರುಗಳು, ಪೋಷಕರು, ಪ್ರಾಯೋಜಕರು, ದಾನಿಗಳು ಹಾಗೂ ಸಹಾಯಕರು ಇವರೆಲ್ಲರ ವಿಶೇಷ ಪರಿಶ್ರಮ ಸಹಕಾರಗಳ ಮೂಲಕ ಮೂಡಿಬಂದ ಈ ಯಶಸ್ವಿ ಕಾರ್ಯಕ್ರಮಕ್ಕೆ ಕಾರಣೀಭೂತರಾದ ಇವರೆಲ್ಲರಿಗೂ ಆನಂದ ಬಳಗದ ಸಾಂಸ್ಕೃತಿಕ ಸಮಿತಿ ಆಭಾರಿಯಾಗಿದೆ.

**– ವರದಿ : ಹೆಚ್. ರಮೇಶ್ ಭಟ್**

# ಪ್ರತಿಭಾ ಸ್ಪರ್ಧೆ – ಬಹುಮಾನ ವಿಜೇತರು

**ಚಿತ್ರಲೇಖನ (6 ವರ್ಷದವರೆಗೆ)**

I ಶಾರ್ವಿರಾವ್
II ನಿಹಿರ ರಾವ್
III ಅಮಾನಿ
ಸಮಾಧಾನಕರ : ಅಗಸ್ತ್ಯ ಪಿ. ಆರ್

**ಚಿತ್ರಲೇಖನ (6–12 ವರ್ಷ)**

I ಪ್ರಣವಿ ರಾವ್
II ಮಹತಿ ಕುಂಜತ್ತಾಯ
III ಸಾನ್ವಿ ಪಿ
ಸಮಾಧಾನಕರ : ಶ್ರೇಯಸ್ ಭಟ್ ಮತ್ತು ಇಕ್ಷಿತ

**ಚಿತ್ರಲೇಖನ (12 ವರ್ಷ ಮೇಲ್ಪಟ್ಟು)**

I ಆರಭಿ ಭಟ್
II ಶಾಶ್ವತ್ ಆರ್.ಕೆ.
III ಸಿರಿ ಕಲ್ಮಾಡಿ

**ಸಂಸ್ಕೃತ ಶ್ಲೋಕ (6 ವರ್ಷದವರೆಗೆ)**

I ಶಾರ್ವಿ ರಾವ್
II ನಿಹಿರಾ ರಾವ್
III ಅಮಾನೀ
ಸಮಾಧಾನಕರ : ವಾಸುದೇವರಾವ್

**ಸಂಸ್ಕೃತ ಶ್ಲೋಕ (6–12 ವರ್ಷದವರೆಗೆ)**

I ಸುಧನ್ವ ಉಡುಪ ಮತ್ತು ಪ್ರದ್ಯೋತ
II ಮಹತಿ ಕುಂಜತ್ತಾಯ
III ಅಪ್ರಮೇಯ
ಸಮಾಧಾನಕರ : ಸನ್ನಿಧಿ ರಾವ್

**ದೇವರನಾಮ (6–12 ವರ್ಷ)**

I ಮಹತಿ ಕುಂಜತ್ತಾಯ
II ಸಿಂಚನ ರಾವ್
III ಸಾನ್ವಿ .ಪಿ

**ದೇವರನಾಮ (12 ವರ್ಷ ಮೇಲ್ಪಟ್ಟು)**

I ಸರ್ವಜಿತ್ ಎ.ಎಸ್.
II ಆರಭಿ ಭಟ್
III ಶ್ರೇಯಸ್ ಜಿ.ಕೆ.
ಸಮಾಧಾನಕರ : ನೇಹ ಕುಬಣೂರ್

**ಭಾವಗೀತೆ / ಚಿತ್ರಗೀತೆ (12 ವರ್ಷ ಮೇಲ್ಪಟ್ಟು)**

I ಆರಭಿ ಭಟ್
II ವರ್ಣಿತ ಉಡುಪ
III ಶಾಶ್ವತ್ ಆರ್.ಕೆ. ಮತ್ತಿ ಸರ್ವಜಿತ್ ಎ.ಎಸ್

**ಆಶುಭಾಷಣ (10–16 ವರ್ಷ)**

I ನಿಧಿ ಕುಬಣೂರ್
II ನೇಹ ಕುಬಣೂರ್
III ಶಾಶ್ವತ್ ಆರ್.ಕೆ.
ಸಮಾಧಾನಕರ : ನವ್ಯ ಕುಬಣೂರ್

**ವಾದ್ಯಸಂಗೀತ (10 ವರ್ಷ ಮೇಲ್ಪಟ್ಟು)**

I ಆರಭಿ ಭಟ್
II ಸರ್ವಜಿತ್ ಎ.ಎಸ್.
III ಆಯುಷ್ ರಾವ್ ಮತ್ತು ಶ್ರೇಯಸ್ ಜಿ.ಕೆ.

**ಛದ್ಮವೇಷ (12 ವರ್ಷದವರೆಗೆ)**

I ಪ್ರಣವಿ ರಾವ್
II ನವ್ಯ ಕೆ.
III ಪ್ರಯೂತ ಅಡಿಗ
ಸಮಾಧಾನಕರ : ಧಾತ್ರಿ ಉಪಾಧ್ಯಾಯ

**ಏಕಪಾತ್ರಾಭಿನಯ (10 ವರ್ಷ ಮೇಲ್ಪಟ್ಟು)**

I ಆರಭಿ ಭಟ್
II ಪವನ್ ರಾವ್
III ಸಿಂಚನ ರಾವ್

**ಬಹುಮಾನ ವಿಜೇತರಿಗೆಲ್ಲಾ ಹಾರ್ದಿಕ ಅಭಿನಂದನೆಗಳು**



**ಶುಭಾಶಯ...**

**ಭೃಗುವಾಣಿಯ ಎಲ್ಲಾ ಓದುಗರಿಗೆ,**
**ಜಾಹೀರಾತುದಾರರಿಗೆ**



**ಹಾಗೂ ಆನಂದ ಬಳಗದ ಎಲ್ಲಾ ಸದಸ್ಯರಿಗೆ**
**ದೀಪಾವಳಿಯ ಶುಭಾಶಯಗಳು**

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ

**HOTEL AJANTHA GROUP OF HOSPITALITY SERVICES**

# HOTEL AJANTHA

***A Boarding and Lodging Hotel of repute with spacious place for parking***
***Party Halls and All facilities***

No. 22/A, Mahatma Gandhi Road, Bangalore-560 001
Phone : 25584321 Fax : 080-25584780
Email : bagilthaya@vsnl.com

## AJANTHA TRINITY INN

***Luxurious Rooms for***
***Comfortable Stay***

Trinity Circle, Mahatma Gandhi Road
Bangalore-560 001

Phone : 25559491 - 5 lines

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

# ದಕ್ಷಿಣ ಬೆಂಗಳೂರಿನ
# ಅತಿ ದೊಡ್ಡ ವಿರಾಮ ತಾಣ
# ಈಗ ನಿಮಗಾಗಿ ತೆರೆದಿದೆ

ರಾಯಲ್ ಮೀನಾಕ್ಷಿ ಮಾಲ್

Come Enjoy Maadi




## ರಾಯಲ್ ಮೀನಾಕ್ಷಿ ಮಾಲ್ ದಕ್ಷಿಣ ಬೆಂಗಳೂರಿನ ಅತಿ ದೊಡ್ಡ ಅತ್ಯುತ್ತಮವಾದ ಏಕೀಕ್ರತ, ಶಾಪಿಂಗ್ ಹಾಗೂ ಮನರಂಜನೆ ಕೇಂದ್ರ

- 4.3 ಲಕ್ಷ ಚ.ಅಡಿ ವಿಸ್ತೀರ್ಣದೊಂದಿಗೆ 850 ಕಾರುಗಳನ್ನು ನಿಲ್ಲಿಸಲು ಸ್ಥಳ
- ದಕ್ಷಿಣ ಬೆಂಗಳೂರಿನ ಐಟಿ ವಲಯಕ್ಕೆ ಬಹಳ ಸಮೀಪದಲ್ಲಿದೆ
- ಜೆ.ಪಿ.ನಗರ, ಬಿ.ಟಿ.ಎಂ. ಲೇಔಟ್, ಜಯನಗರ, ಬನಶಂಕರಿ ಮುಂತಾದ ನಿವಾಸಗಳಿರುವ ಬಡಾವಣೆಗಳಿಗೆ ಸಮೀಪದಲ್ಲಿದೆ.
- ಉದ್ದೇಶಿಸಲಾದ ಮೋನೋ ರೈಲ್ ನಿಲ್ದಾಣಕ್ಕೆ ಸಮೀಪದಲ್ಲಿದೆ
- ಸೌಕರ್ಯಗಳು ಅಂತರರಾಷ್ಟ್ರೀಯ ಗುಣಮಟ್ಟದಾಗಿರುತ್ತವೆ

The brand mix includes: Cinepolis | Big Bazaar | Max | Croma | Reliance Trends | Amoeba | Aharam- The Food Court | KFC | McDonald's | TGIF | Louis Philippe | Allen Solly | Bata | Woodlands | Levi's | Lenskart | Burger King | VIP Luggage | Kurlon | Chai Point | FabIndia | Heath & Glow | Taco Bell | Van Heusen | Shoppers Stop | Pantaloons Women & other leading national & international brands / retail outlets

**Vishala India Commercial Developers Pvt Ltd**

Royal Meenakshi Mall, 4th Floor, Bannerghatta Road, Bangalore - 560076. Phone No - 080 – 67080100

*With best wishes from*

Beloor Bayir

**beloorbayir biotech ltd.**

Pioneers and leading manufacturers of

**Glucosamine**

*(all six variants)*

useful in the management of Arthritis.

Exporter's of

Bulk drugs, API's, Formulations

&

**Herbal Extracts**

produced from its own

100% EOU

Specialist's in Nano Technology

**Nano Curcumin**

**visit us @ www.beloorbayir.com**

Sneha Natura

**Sneha Natura**

*for*

*Progressive Ayurveda*

*Makers of*

The No.1 Osteo Arthritic

AYU ginee Tablets

- - *the* **NATURAL** *OsteoArthritic*

*Start your day* AFRESH

*with* Laxsen™ Capsules

Gentle *LAXATIVE* for smooth evacuation

In teens and adolescents

*with* Pimples *(Acne vulgaris)*

Clearoff Cream

The multi-action topical

Restores self Esteem

NUTRIHERB® Tonic



The Complete family tonic

*for other product range*

**visit us @ www.snehanatura.com**

Customer care No.: +91 80 26652479


ನನ್ನ ಬ್ಯಾಂಕ್ ಖಾತೆ ನನಗೆ ಬೇಕಾದಂತೆ
ಕೆಬಿಎಲ್
ವನಿತಾ
ಮಹಿಳೆಯರಿಗಾಗಿ ಉಳಿತಾಯ ಖಾತೆ
ಕೆಬಿಎಲ್ ವನಿತಾ ಹೊಸ ಉಳಿತಾಯ ಖಾತಾ ಸೌಲಭ್ಯವನ್ನು ವಿಶೇಷವಾಗಿ ಮಹಿಳೆಯರಿಗಾಗಿಯೇ ಪ್ರಸ್ತುತ ಪಡಿಸಲು ಹೆಮ್ಮೆಪಡುತ್ತಿದ್ದೇವೆ. ಹಲವಾರು ಸೌಲಭ್ಯಗಳನ್ನು ಹೊಂದಿರುವ ಇದು ಎಲ್ಲಿ, ಯಾವಾಗಲಾದರೂ ಬ್ಯಾಂಕಿಂಗ್ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಲು ನೆರವಾಗುತ್ತದೆ.
ವಿಶೇಷ ಸೌಲಭ್ಯಗಳು *
• ಕನಿಷ್ಠ ಉಳಿಕೆ ಇರಬೇಕೆಂದಿಲ್ಲ
• ಉಚಿತ ಮನಿಪ್ಲಾಂಟ್-ಅಂತಾರಾಷ್ಟ್ರೀಯ ವೀಸಾ ಡೆಬಿಟ್ ಕಾರ್ಡ್
• ಉಚಿತ ಇಂಟರ್‌ನೆಟ್ ಬ್ಯಾಂಕಿಂಗ್ ಸೌಲಭ್ಯ
• ಉಚಿತ ಎಸ್‌ಎಂಎಸ್
• ಬಹುಶಾಖಾ ಸೌಲಭ್ಯ
• ಉಚಿತವಾಗಿ ಹಣ ವರ್ಗಾವಣೆ
ಉಚಿತ
₹50,000* ವರೆಗೆ ಚಿನ್ನಾಭರಣಗಳ ಮೇಲೆ ವಿಮೆ
ಸರಳ ಬ್ಯಾಂಕಿಂಗ್‌ಗಾಗಿ ಕೆಬಿಎಲ್ ವನಿತಾ ಉಳಿತಾಯ ಖಾತೆ ಇಂದೇ ತೆರೆಯಿರಿ.
ಹೆಚ್ಚಿನ ಮಾಹಿತಿಗಾಗಿ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ
ಕರ್ಣಾಟಕ ಬ್ಯಾಂಕ್ ಲಿ.
ನೋಂದಾಯಿತ ಹಾಗೂ ಪ್ರಧಾನ ಕಛೇರಿ: ಮಂಗಳೂರು – 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

# FRIDGE HOUSE

Distributor & Dealer for

**HAVELLS Brand (Lloyd) AC's & CARRIER MIDEA Air Conditioners**




Split AC




Cassette AC

Tower AC



Window AC



Ductable AC

**Contact Persons: Mr. M K Prasad & Mr. B Krishnaswamy – M: 9845330571**

# FRIDGE HOUSE

FRIDGE HOUSE DELIVERING TRUST

Enriching Lives

## Wholesaler & Importers,

M/s. Emerson Commercial & Residential Solutions

Dealers: M/s. Kirloskar Pneumatic Co. Ltd.

M/s. Gujarat Fluorochemicals Ltd.

## EQUIPMENTS & COMPONENTS. for

**HVAC & R,* COLD ROOMS,* RIPENING CHAMBERS,* HEAT PUMPS.**

**Adithya Tower # 23, V.S.N Road, Shivaji Nagar, Bengaluru – 560 051.**
**Ph. No: 080-22861936, 22860260, 41513104, 41513105 & 41238022**
**Email ID :** info@fridgehouse.net; **Web Site:** www.fridgehouse.net


**Contact Persons: M.K. Prasad & Mr. Nagesh D Prabhu – M: 9845217197**

*With Best Compliments from :*

# HOTEL DWARAKA

Anand Rao Circle
BANGALORE-560 009

**N.R. Narayana Rao**
**Managing Partner**




## ವಸತಿ ಗೃಹ

**ನಮ್ಮ ವಿಶೇಷತೆಗಳು**

ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ, ಬೆಳಕಿರುವ,
ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ,
ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ. ಮತ್ತು
ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ...

**ದೂರವಾಣಿ : 22265011 (8 ಮಾರ್ಗಗಳು), 22268263, 22268264**

*With Best Compliments from :*

# P.C. RAO

## RAO IDEAL SERVICES PRIVATE LIMITED

*Specialists in*

Staff Outsourcing and Facility Management

No. 63, 5th Cross, Vasanth Nagar,
Bangalore - 560 052
Mobile : 98444 94630
e-mail : raoideal@yahoo.co.in



# ENGINEERING CONSULTANCY SERVICES FOR CONSTRUCTIONS

## CRUTHI Consultants Consortium Pvt. Ltd.

### Services Offered :

**In**

- Structural Engineering
- Civil Consultancy
- Project Management
- Water & Sewerage, Fire etc.,
- Electrical & Security
- HVAC & Networking

**For**

- I T Industry
- Factories
- Institutions
- Hotels and Resorts
- Commercial
- Residential

No. 204, 2ND MAIN ROAD, 4TH BLOCK,
RAJAJINAGAR, BANGALORE – 560 010
TEL: +91 80 23 15 20 14, +91 99 45 66 63 06
FAX: +91 80 41 28 22 07
EMAIL: info@cruthi.com, WEBSITE: www.cruthi.in

CONTACT:

| | |
|---|---|
| MR. DINESH RAO MUNDRUPPADY | MOB: 99456 88955 |
| MR. VASUDEVAN T S | MOB: 98450 26743 |
| MR. VIJAY KUMAR KULKARNI | MOB: 99456 96649 |

# ನೆಮ್ಮದಿ ವಿಶ್ರಾಂತಿಧಾಮ

## ನೆಮ್ಮದಿ ಶ್ರೀ ಲಕ್ಷ್ಮೀನರಸಿಂಹ ಟ್ರಸ್ಟ್‌ನ ಅಂಗಸಂಸ್ಥೆ

ನೆಮ್ಮದಿ ಸಂಸ್ಥೆ 12 ವರ್ಷಗಳಿಂದ ಹಿರಿಯ ನಾಗರಿಕರಿಗಾಗಿ ಸ್ಥಾಪಿಸಿದ ವಿಶ್ರಾಂತಿಧಾಮವನ್ನು ಇನ್ನಷ್ಟು ಸುಸಜ್ಜಿತವಾಗಿ ವಿಸ್ತರಿಸಿ, ಅನೇಕ ರೋಗಗಳಿಂದ ತೊಂದರೆಗೊಳಗಾಗಿ ಕಷ್ಟಪಡುತ್ತಿರುವ ವಯೋವೃದ್ಧರಿಗಾಗಿ ಹೆಚ್ಚಿನ ವೈದ್ಯಕೀಯ ಸೇವೆಯನ್ನು ಕೊಡುವ ಉದ್ದೇಶದಿಂದ ಮತ್ತೊಂದು ನೂತನ ಕಟ್ಟಡವನ್ನು ನಿರ್ಮಿಸಿದೆ.

ದಾನಿಗಳ ಸಹಕಾರದಿಂದ ಕಟ್ಟಿದ ನೂತನ ಕಟ್ಟಡದ ವೈಶಿಷ್ಟ್ಯಗಳು ಹೀಗಿದೆ.

* ನೆಲ ಹಾಗೂ 4 ಮಹಡಿಗಳ ಸುಸಜ್ಜಿತವಾದ ಕಟ್ಟಡ.
* ಒಬ್ಬರಿಗೆ, ಇಬ್ಬರಿಗೆ, ಸಮೂಹ (ಡಾರ್ಮೆಟರಿ) ಕೊಠಡಿಗಳ ವ್ಯವಸ್ಥೆ.
* ಪ್ರತೀ ಕೊಠಡಿಯಲ್ಲೂ ವಿಶೇಷವಾಗಿ ವಿನ್ಯಾಸಗೊಳಿಸಿರುವ ಮಂಚ, ಊಟ ಮಾಡಲು ಬೇಕಾದ ಅನುಕೂಲ. ಪರದೆಗಳು ಹಾಗೂ ವಿಶಾಲವಾದ ಬಚ್ಚಲುಮನೆ.
* ಪ್ರತೀ ಕೊಠಡಿಯಲ್ಲೂ ಟಿ.ವಿ. ಹಾಗೂ ಹವಾನಿಯಂತ್ರಣದ ವ್ಯವಸ್ಥೆ.
* ಸೊಳ್ಳೆಗಳ ನಿಯಂತ್ರಣಕ್ಕಾಗಿ ವಿಶೇಷ ಕಿಟಕಿಗಳು.
* ಎಲ್ಲಾ ಬಚ್ಚಲು ಮನೆಗಳಲ್ಲಿ ಸೋಲಾರ್ ಹಾಗೂ ಗೀಸರ್ ಮೂಲಕ ಬಿಸಿ ನೀರಿನ ವ್ಯವಸ್ಥೆ.
* ಸಾತ್ವಿಕ, ಶುಚಿ, ರುಚಿಯಾದ ಸಸ್ಯಾಹಾರವನ್ನು ಸರಿಯಾದ ಸಮಯದಲ್ಲಿ ಅವರಿರುವಲ್ಲಿಗೆ ಒದಗಿಸುವ ವ್ಯವಸ್ಥೆ.
* 24 ಘಂಟೆಗಳ ಲಿಫ್ಟ್ ಸೇವೆ ಹಾಗೂ ತಡೆರಹಿತ ವಿದ್ಯುತ್ ಪೂರೈಕೆಗಾಗಿ ಜನರೇಟರ್.
* ದಿನವಿಡೀ ಶುಶ್ರೂಷಕರ ಸೇವೆ, ಕರೆ ಗಂಟೆಗಳ ವ್ಯವಸ್ಥೆ.
* ಪ್ರತೀದಿನ ವಾಕಿಂಗ್, ಯೋಗ, ಧ್ಯಾನ, ಭಜನೆ ಮಾಡಲು ಅನುಕೂಲತೆ.
* ಹಿರಿಯರನ್ನು ನೋಡಲು ಬರುವವರಿಗೆ ತಂಗಲು ಕೊಠಡಿಗಳು ಹಾಗೂ ಪ್ರತೀ ಮಹಡಿಯಲ್ಲೂ ವಿಶ್ರಾಂತಿಕೋಣೆಯ ವ್ಯವಸ್ಥೆ.
* ಸಮಯದ ಸದುಪಯೋಗಕ್ಕೆ ವಾಚನಾಲಯ, ಕೈತೋಟ, ಸಾಮೂಹಿಕ ಟಿ.ವಿ. ಹಾಗೂ ಆರೋಗ್ಯ ನಡಿಗೆಯ ವ್ಯವಸ್ಥೆ.
* ಪ್ರೀತಿಯಿಂದ ಸೇವೆ ಮಾಡುವ ಸಿಬ್ಬಂದಿ ವರ್ಗ.
* ಆರ್ಥಿಕವಾಗಿ ದುರ್ಬಲರಾದವರಿಗೆ ವಿಶೇಷ ರಿಯಾಯಿತಿ.


ಹೆಚ್ಚಿನ ವಿವರಗಳಿಗಾಗಿ ಭೇಟಿ ನೀಡಿ : **ನೆಮ್ಮದಿ ವಿಶ್ರಾಂತಿ ಧಾಮ**

ನಂ 24, 2ನೇ ಅಡ್ಡರಸ್ತೆ, ವಿದ್ಯಾಮಾನ್ಯನಗರ, ಆಂಧ್ರಹಳ್ಳಿ

ವಿಶ್ವನೀಡಂ ಅಂಚೆ, ಬೆಂಗಳೂರು – 560 091

ದೂ : 93412 28208 / 93437 83087

ಇ–ಮೈಲ್ : nemmadislntrust @ gmail.com

ವೆಬ್‌ಸೈಟ್ : www.nemmaditrust.org.in


ನಿಮ್ಮ ಧನ ಸಹಾಯಕ್ಕೆ ಆದಾಯತೆರಿಗೆಯ ೮೦(ಜಿ)ಯ ವಿನಾಯಿತಿ ಇದೆ.

# ಆನಂದ ಬಳಗದ 30ನೆಯ ಸರ್ವಸದಸ್ಯರ ವಾರ್ಷಿಕ ಮಹಾಸಭೆ

ಆನಂದ ಬಳಗದ ಮೂವತ್ತನೆಯ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ದಿನಾಂಕ 9.9.2018 ರ ಭಾನುವಾರ ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಅಜಂತಾ ಹೋಟೆಲಿನ ರೋಹಿಣಿ ಸಭಾಂಗಣದಲ್ಲಿ ನಡೆಯಿತು.

✧ ಅಧ್ಯಕ್ಷರಾದ ಶ್ರೀಮತಿ ಗೀತಾ ವಾಸುದೇವ ರಾವ್, ಉಪಾಧ್ಯಕ್ಷರುಗಳಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ ಮತ್ತು ಶ್ರೀಮತಿ ವಿಜಯಲಕ್ಷ್ಮಿ ಭಟ್, ಕಾರ್ಯದರ್ಶಿ ಶ್ರೀ ಹರಿದಾಸ ಉಪಾಧ್ಯಾಯ, ಕೋಶಾಧಿಕಾರಿ ಶ್ರೀ ವೈ. ರಾಧಾಕೃಷ್ಣರವರು ವೇದಿಕೆಯನ್ನು ಅಲಂಕರಿಸಿದರು. ಜೊತೆಗೆ ಮಾಜಿ ಅಧ್ಯಕ್ಷರುಗಳಾದ ಶ್ರೀಯುತ ಎಸ್.ಟಿ.ಆರ್ ಮಡಿ, ಶ್ರೀಯುತ ಅನಂತಪದ್ಮನಾಭ ಬಲ್ಲಾಳ್, ಶ್ರೀಯುತ ವಾಸುದೇವರಾವ್ ಮತ್ತು ಶ್ರೀಯುತ ಪಿ. ಸುಬ್ರಮಣ್ಯ ಬಾಗಿಲ್ತಾಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

✧ ಪ್ರಾರಂಭದಲ್ಲಿ ಪ್ರಾರ್ಥನೆಯನ್ನು ಸಾಂಸ್ಕೃತಿಕ ವಿಭಾಗದ ಸಂಚಾಲಕರಾದ ಶ್ರೀರಮೇಶ್ ಭಟ್‌ರವರು ನಡೆಸಿಕೊಟ್ಟರು.

✧ ಅಧ್ಯಕ್ಷರು ಸರ್ವಸದಸ್ಯರ ವಾರ್ಷಿಕ ಮಹಾಸಭೆಗೆ ಅಧಿಕೃತವಾಗಿ ಚಾಲನೆ ನೀಡಿದರು.

✧ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಕಾರ್ಯದರ್ಶಿ ಶ್ರೀಹರಿದಾಸ ಉಪಾಧ್ಯಾಯರು ಓದಿದರು.

✧ ಶ್ರೀ ಬಾ.ರಾಮಚಂದ್ರ ಉಪಾಧ್ಯರು ವಾರ್ಷಿಕ ಮಹಾಸಭೆಗೆ ಆಗಮಿಸಿದ ಸದಸ್ಯರುಗಳನ್ನು ಹಾರ್ದಿಕವಾಗಿ ಸ್ವಾಗತಿಸಿದರು.

**2017–18ರಲ್ಲಿ ಬಳಗದ ಗಮನಕ್ಕೆ ಬಂದಂತೆ ಈ ಕೆಳಗಿನ ಗಣ್ಯರು ಹಾಗೂ ಸದಸ್ಯರು ಇಹಲೋಕವನ್ನು ತ್ಯಜಿಸಿದ್ದರು.**

- ಶ್ರೀಶ್ರೀಶ್ರೀ ಲಕ್ಷ್ಮೀವರತೀರ್ಥ ಸ್ವಾಮೀಜಿ, ಶೀರೂರು ಮಠ ಉಡುಪಿ
- ಶ್ರೀ ಅಟಲಬಿಹಾರಿ ವಾಜಪೇಯಿ, ಮಾಜಿ ಪ್ರಧಾನಿಗಳು
- ವಿದ್ವಾನ್ ಕುರುಡಿ ವೆಂಕಣ್ಣಾಚಾರ್ ದೇವರನಾಮ ತರಗತಿಯ ಶಿಕ್ಷಕರು
- ವಿದ್ವಾನ್ ಟಿ. ರಾಮಕೃಷ್ಣ ಕೇಕುಡ
- ಶ್ರೀ ಟಿ. ರಾಮಕೃಷ್ಣರಾವ್
- ಶ್ರೀಮತಿ ವಸಂತಿ ಮುರಳೀಧರ್‌ರಾವ್
- ಶ್ರೀ ಶ್ರೀಪತಿ ರಾವ್
- ಶ್ರೀ ವಿ.ಎನ್. ಕೆದ್ಲಾಯ
- ಶ್ರೀ ಶ್ರೀನಿವಾಸ ರಾವ್
- ಶ್ರೀಮತಿ ಸರೋಜಿನಿ ಆಟಾರ
- ಶ್ರೀ ಲಕ್ಷ್ಮೀ ನಾರಾಯಣ ಭಟ್ ಎ.
- ಶ್ರೀಮತಿ ಜಿ ವಸಂತಿ ರಾವ್

ಮೃತರ ಗೌರವಾರ್ಥ ಒಂದು ನಿಮಿಷದ ಮೌನ ಪ್ರಾರ್ಥನೆಯೊಂದಿಗೆ ಶ್ರದ್ಧಾಂಜಲಿಯನ್ನು ಅರ್ಪಿಸ ಲಾಯಿತು.

✧ 2016–17ನೇ ಸಾಲಿನ 17.9.2017 ರಂದು ನಡೆದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ವರದಿಯನ್ನು ಜತೆಕಾರ್ಯದರ್ಶಿ ಶ್ರೀ ಸಂದೀಪರವರು ಓದಿದರು.

✧ 2017–18ರ ವರ್ಷದಲ್ಲಿ ಆನಂದ ಬಳಗವು ನಡೆಸಿದ ಕಾರ್ಯಚಟುವಟಿಕೆಗಳ ವರದಿಯನ್ನು ಕಾರ್ಯದರ್ಶಿ ಶ್ರೀಹರಿದಾಸ ಉಪಾಧ್ಯಾಯರು ಓದಿ ಸಭೆಗೆ ತಿಳಿಸಿದರು.

✧ ಕೋಶಾಧಿಕಾರಿ ಶ್ರೀ ವೈ. ರಾಧಾಕೃಷ್ಣರವರು ದಿನಾಂಕ 31.3.2018ಕ್ಕೆ ಮುಕ್ತಾಯವಾದ ವರ್ಷದ ಪರಿಶೋಧಿತ ಲೆಕ್ಕಪತ್ರಗಳನ್ನು ಸಭೆಯಲ್ಲಿ ಮಂಡಿಸಿದರು.

ಈ ಮೂರು ವರದಿಗಳ ಬಗ್ಗೆ ಸದಸ್ಯರ ಅನಿಸಿಕೆ, ಅಭಿಪ್ರಾಯ, ಸಲಹೆಗಳನ್ನು ಕೇಳಲಾಯಿತು.

✧ ಜಾಹೀರಾತಿನ ದರಗಳ ಬಗ್ಗೆ ಸದಸ್ಯರೊಬ್ಬರು ಕೇಳಿದ ಪ್ರಶ್ನೆಗೆ ಇತ್ತೀಚೆಗಿನ ದಿನಗಳಲ್ಲಿ ದರಗಳಲ್ಲಿ ಯಾವುದೇ ಬದಲಾವಣೆ ಮಾಡಿಲ್ಲವೆಂದು ಕೋಶಾಧಿಕಾರಿಗಳು ಉತ್ತರವಿತ್ತರು.

ಮೂರೂ ವರದಿಗಳ ಬಗ್ಗೆ ಮಾತನಾಡುತ್ತಾ ಶ್ರೀ ಕೋಟೇಶ್ವರ ಸೂರ್ಯನಾರಾಯಣ ರಾಯರು ಆನಂದ ಬಳಗದ ಕಾರ್ಯವೈಖರಿಯ ಬಗ್ಗೆ ತುಂಬು ಹೃದಯದ ಸಂತಸವನ್ನು ವ್ಯಕ್ತಪಡಿಸಿದರು.

ಮುಂದಿನ ಪೀಳಿಗೆಗೆ ನಮ್ಮ ಸನಾತನ ಸಂಸ್ಕೃತಿಯ ಪರಿಚಯ, ವಿವಿಧ ಕಲಾಪ್ರಾಕಾರಗಳಲ್ಲಿ ಮಕ್ಕಳಿಂದ ಕಾರ್ಯಕ್ರಮ, ದೇವರನಾಮದ ತರಗತಿಗಳು, ಭೃಗುವಾಣಿಯ ಪ್ರಕಟಣೆ ಎಲ್ಲಕ್ಕಿಂತ ಮಿಗಿಲಾಗಿ ಬಳಗದ ಮಹಿಳಾ ವಿಭಾಗದವರು ಹತ್ತೊಂಭತ್ತು

ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ವಧೂವರಾನ್ವೇಷಣೆಯ ಕಾರ್ಯಕ್ರಮಗಳು ಪ್ರತಿಯೊಬ್ಬನ ಗಮನವನ್ನೂ ಸೆಳೆಯುವಂತಾದ್ದು ಎಂದು ಮನಃಸಾರೆ ಶ್ಲಾಘಿಸಿದರು. ಪ್ರಾಯಶಃ ಈ ರೀತಿಯ ಶಿಸ್ತುಬದ್ಧ ವಧೂವರಾನ್ವೇಷಣೆಯ ಕೇಂದ್ರ ನಮ್ಮ ಕರಾವಳಿಯಲ್ಲೂ ಕಾಣಸಿಗದು ಎಂದು ತನ್ನ ಅಭಿಪ್ರಾಯವನ್ನು ತಿಳಿಸಿದರು.

ಮುಂದುವರಿಸುತ್ತಾ ಪ್ರಾರಂಭದಲ್ಲಿ ಆನಂದ ಸಭಾಗೃಹವು ಸ್ವಲ್ಪ ಹಿನ್ನಡೆಯನ್ನು ಅನುಭವಿಸಿದರೂ ಈಗ ಅದು ಪುನಃಶ್ಚೇತನಗೊಂಡು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸಂತಸದ ವಿಚಾರ ಎನ್ನುತ್ತಾ ಸಭಾಗೃಹದ ನಿರ್ಮಾಣ ಹಂತದಲ್ಲಿನ ಸಾಲ ತೀರಿದ ಮೇಲಾದರೂ ಆನಂದ ಬಳಗಕ್ಕೆ ನಗರದ ಮಿತಿಯೊಳಗೆ ತನ್ನದೇ ಆದ ನಿವೇಶನ ಮತ್ತು ಕಛೇರಿಯ ವ್ಯವಸ್ಥೆಯ ಕಡೆಗೆ ಗಮನಹರಿಸ ಬೇಕಾದುದು ಅವಶ್ಯ ಎಂದರು.

✧ ಶ್ರೀ ಕೆ. ಎನ್. ಅಡಿಗರು ಆನಂದಬಳಗ 30ನೆಯ ವರ್ಷದ ಸಂದರ್ಭದಲ್ಲಾದರೂ ಈ ಬಯಕೆ ಈಡೇರುವ ಆಶಾಭಾವನೆಯನ್ನು ವ್ಯಕ್ತಪಡಿಸಿದರು.

✧ ಶ್ರೀ ಶ್ರೀನಿವಾಸಾಚಾರ್ ರವರು ಶ್ರೀ ಕೋಟೇಶ್ವರ ಸೂರ್ಯನಾರಾಯಣ ರಾಯರ ಅಭಿಪ್ರಾಯವನ್ನು ಅನುಮೋದಿಸಿದರು.

✧ ಶ್ರೀ ಬಿ. ಪಿ. ರಾವ್‌ರವರು ಲೆಕ್ಕಪತ್ರಗಳ ಬಗ್ಗೆ ಮಾತಾಡುತ್ತಾ ವಿದ್ಯಾಸಹಾಯ ಯೋಜನೆಯ ಠೇವಣಿಯನ್ನು ಬೇರೆಯಾಗಿಯೇ ತೋರಿಸುವುದು ಸೂಕ್ತ ಎಂದು ಸಲಹೆ ನೀಡಿದರು.

✧ ಆನಂದ ಸಭಾಗೃಹದ ನಿರ್ಮಾಣ ಕಾರ್ಯಕ್ಕೆ ಧನ ಸಹಾಯ ನೀಡಿದ ದಾನಿಗಳ ಹೆಸರುಗಳನ್ನು ಸಭಾಗೃಹದಲ್ಲಿ ಫಲಕಗಳಲ್ಲಿ ಬರೆಸುವ ವಿಚಾರದ ಬಗ್ಗೆ ಶ್ರೀ ಸೂರ್ಯನಾರಾಯಣರಾಯರು ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸುತ್ತಾ ಶ್ರೀಯುತ ಬಿ.ಪಿ.ರಾಯರು ಇತ್ತೀಚೆಗೆ ನಡೆದ ಟ್ರಸ್ಟಿಗಳ ಸಭೆಯು ಈ ವಿಚಾರದ ಬಗ್ಗೆ ವಿಸ್ತೃತವಾದ ಚರ್ಚೆ ನಡೆಸಿ, ಹೀಗೆ ಹೆಸರುಗಳನ್ನು ಬರೆಸುವ ಅವಶ್ಯಕತೆಯಿಲ್ಲ ಎಂಬ ಅಭಿಪ್ರಾಯ ಮೂಡಿ ಬಂದಿದೆ ಎಂದರು. ಅಂತಿಮವಾಗಿ ಕಳೆದ ವಾರ್ಷಿಕ ಮಹಾ ಸಭೆಯ ವರದಿಯನ್ನು ಶ್ರೀಯುತ ನಾರಾಯಣ ತಂತ್ರಿಗಳು ಮತ್ತು ಬಾಲಕೃಷ್ಣ ಉಪಾಧ್ಯಾಯರು ವಾರ್ಷಿಕ ವರದಿಯನ್ನು ಶ್ರೀಯುತ ಫಣಿರಾಜ ಹೆಬ್ಬಾರ್ ಮತ್ತು ಶ್ರೀ.ಪಿ.ಸಿ ಚಡಗರವರು, ಪರಿಶೋಧಿತ ಲೆಕ್ಕಪತ್ರಗಳನ್ನು ಶ್ರೀಯುತ ಶ್ರೀಕಾಂತ ಮಯ್ಯ ಮತ್ತು ಶ್ರೀಯುತ ಕೋಟೇಶ್ವರ ಸೂರ್ಯ ನಾರಾಯಣರಾಯರು ಕ್ರಮವಾಗಿ ಅಂಗೀಕರಿಸಲು ಸೂಚನೆ ಮತ್ತು ಅನುಮೋದನೆಯನ್ನು ತಿಳಿಸಿದರು.

✧ 2018-19 ರ ಸಾಲಿಗೆ ಮೆ॥ ಜಿ.ವಿ. ಆಚಾರ್ಯ ಮತ್ತು ಕಂಪೆನಿಯವರನ್ನೇ ಲೆಕ್ಕಪರಿಶೋಧಕರಾಗಿ ಮುಂದು ವರಿಸುವ ಸರ್ವಾನುಮತದ ನಿರ್ಣಯವನ್ನು ಸಭೆಯು ಕೈಗೊಂಡಿತು. ಅವರು ಬಳಗಕ್ಕೆ ನೀಡುತ್ತಿರುವ ಸೇವೆಗಳಿಗೆ ಅಭಿನಂದನೆಯನ್ನು ಸಲ್ಲಿಸಲಾಯಿತು.

✧ ಇತರ ವಿಷಯಗಳ ಬಗ್ಗೆ ಸದಸ್ಯರಿಗೆ ಅವಕಾಶ ಕಲ್ಪಿಸಲಾಯಿತು. ಪ್ರಸಕ್ತ ಬೈಲಾ ಪ್ರಕಾರ ಆನಂದ ಬಳಗಕ್ಕೆ ಆದಾಯ ತೆರಿಗೆ ವಿನಾಯಿತಿ ಸಿಗುವ ಅವಕಾಶವಿರದು ಎಂದು ಹಿರಿಯ ಸದಸ್ಯ ಶ್ರೀ ಪಿ.ಸಿ.ಚಡಗರವರು ಸಭೆಗೆ ತಿಳಿಸಿದರು. ನಗರದಲ್ಲಿ ಕಛೇರಿ ಸ್ಥಾಪನೆಗೆ ಕನಿಷ್ಠ 2-3 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ ಎಂದು ಶ್ರೀ ಚಡಗರು ತನ್ನ ಅನಿಸಿಕೆಯಲ್ಲಿ ತಿಳಿಸುತ್ತಾ, ಪ್ರಯತ್ನಿಸಿದರೆ ಸಾಧ್ಯವಾಗಬಹುದೆಂಬ ಆಶಾಭಾವನೆಯನ್ನು ವ್ಯಕ್ತ ಪಡಿಸಿದರು.

ಆನಂದ ಬಳಗ ಚಾರಿಟೆಬಲ್ ಟ್ರಸ್ಟ್‌ಗೆ ಆದಾಯ ತೆರಿಗೆ ವಿನಾಯಿತಿ ಇರುವುದರಿಂದ ವಿದ್ಯಾರ್ಥಿ ಸಹಾಯ ಯೋಜನೆಗೆ ಟ್ರಸ್ಟ್ ಮುಖಾಂತರ ಹಣ ನೀಡಬಹುದೆಂಬ ಅಭಿಪ್ರಾಯವನ್ನು ಶ್ರೀಯುತ ಬಿ.ಪಿ.ರಾಯರು ನೀಡಿದರು.

ಶ್ರೀಯುತ ಮುರಲೀಧರ ರಾಯರು ಬಿಡಿಎ ನಿರ್ಮಿಸುತ್ತಿರುವ ಫ್ಲಾಟ್‌ಗಳ ಬಗ್ಗೆ ಯೋಚಿಸಬಹುದೆಂದೂ ಅದರಲ್ಲಿ 10% ರಿಯಾಯಿತಿ ಸಿಗುವ ವಿಚಾರವನ್ನು ತಿಳಿಸಿದರು.

– ಆನಂದ ಬಳಗದ ಕಾರ್ಯಾಲಯವು ತನ್ನ ಪ್ರಾರಂಭದ ದಿನಗಳಿಂದಲೂ ಶ್ರೀ ಎಸ್.ಎನ್. ಶರತ್‌ಚಂದ್ರರವರ ಕಛೇರಿಯೇ ಆಗಿತ್ತು. ಆದರೆ ಶ್ರೀ ಶರತ್ ಚಂದ್ರರವರು ತನ್ನ ಕಛೇರಿಯನ್ನು ಸ್ವಲ್ಪದೂರದ ವಿಶಾಲವಾದ ಸ್ಥಳಕ್ಕೆ ಸ್ಥಳಾಂತರಿಸಿದುದರಿಂದ ಬಳಗದ ಅನುಕೂಲತೆಗಳನ್ನು ಪರಿಗಣಿಸಿ ಅದರ ಕಛೇರಿಯನ್ನು ಅಜಂತಾ ಹೋಟೆಲಿಗೆ ವರ್ಗಾಯಿಸ ಲಾಯಿತು. 30 ವರ್ಷಗಳ ಕಾಲ ಕಛೇರಿಗೆ ಸ್ಥಳಾವಕಾಶ ಮಾಡಿಕೊಟ್ಟಿದ್ದ ಶ್ರೀ ಶರತ್ ಚಂದ್ರರವರಿಗೆ ಪುಷ್ಪಾಹಾರವನ್ನರ್ಪಿಸಿ ಅಭಿನಂದಿಸಲಾಯಿತು.


– ಬಳಗದ ಸದಸ್ಯರುಗಳಾದ ನ್ಯಾಯವಾದಿ ಶ್ರೀಯುತ ಎಸ್.ಎನ್. ಪ್ರಶಾಂತ ಚಂದ್ರ ಮತ್ತು ಯೋಗಪಟು ಶ್ರೀಯುತ ಪಿ.ಸಿ. ಮುಕುಂದರಾವ್ ರವರಿಗೆ 2018ರ ಸಾಲಿನ ಕೆಂಪೇಗೌಡ ಪ್ರಶಸ್ತಿ ನೀಡಿ ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯವರು ಸನ್ಮಾನಿಸಿದ್ದಾರೆ. ಅವರ ಅನುಪಸ್ಥಿತಿಯಲ್ಲಿ ಅವರಿಬ್ಬರಿಗೂ ಅಭಿನಂದನೆಗಳನ್ನು ಸಲ್ಲಿಸಲಾಯಿತು.

ಅಧ್ಯಕ್ಷರು ತಮ್ಮ ನುಡಿಗಳಲ್ಲಿ ಸದಸ್ಯರುಗಳ ಸಹಕಾರವೇ ಆನಂದ ಬಳಗದ ಶಕ್ತಿ ಎಂದರು. ವಧೂವರಾನ್ವೇಷಣೆಯ ವ್ಯವಸ್ಥೆಯ ಬಗ್ಗೆ ಮೆಚ್ಚಿ ಮಾತಾಡಿದುದನ್ನು ಪ್ರಸ್ತಾಪಿಸುತ್ತಾ ಇದರ ಯಶಸ್ಸಿನ ಹಿಂದೆ ಶ್ರೀಮತಿ ವಿಜಯಲಕ್ಷ್ಮಿ ಭಟ್ ಮತ್ತು ಶ್ರೀ ಶ್ರೀಪತಿ ಭಟ್ ಶ್ರಮ ಮತ್ತು ನಿಸ್ವಾರ್ಥ ಸೇವೆಗಳು ಅಡಗಿದೆ ಎಂದರು.

– ಸಹಾಯಕ ಕೋಶಾಧಿಕಾರಿ ಶ್ರೀಯುತ ಬಾಲಚಂದ್ರ ತೋಲ್ಪಾಡಿಯವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

– ಸಭೆಯ ಪೂರ್ವಭಾವಿಯಾಗಿ ಅಜಂತಾ ಹೋಟೆಲಿನವರ ಸೌಜನ್ಯದಿಂದ ಭರ್ಜರಿ ಫಲಾಹಾರದ ವ್ಯವಸ್ಥೆಯೂ ಇತ್ತು.

ವರದಿ : ಶಿವಹರಿ



## ನಮ್ಮ ರಕ್ಷಿಸೋ ಶ್ರೀನಿವಾಸ

**ರಾಗ: ಗೌಳ** **ತಾಳ: ಖಂಡ ಚಾಪು**

ಶ್ರೀ ಮಹಾ ತಿರುಪತಿ ವಾಸ, ಸರ್ವೇಶ ಶ್ರೀನಿವಾಸ ।
ಆ ಮಹಾ ಭಕ್ತರ ಪೋಷ, ಭಯನಾಶ ಶ್ರೀನಿವಾಸ ॥

ಭಕ್ತ ಜನರ ರಕ್ಷ, ಭವ್ಯ ಶರೀರ ಶ್ರೀ ಶ್ರೀನಿವಾಸ ।
ಮುಕ್ತಿದಾಯಕ ಕಡು ಮೂರ್ಖಜನ ಶಿಕ್ಷ ಶ್ರೀನಿವಾಸ ॥

ನಂಬಿದೆ ನಿನ್ನಯ ಚರಣವ ಗತಿಯೊಂದು ಶ್ರೀನಿವಾಸ ।
ಬೆಂಬಿಡದೆ ನಮ್ಮ ಪಾಲಿಸುವ ಕೀರ್ತಿಯು ನಿನ್ನದಯ್ಯ
ಶ್ರೀನಿವಾಸ ॥

ದೃಢ ಭಕ್ತಿ ನಮಗಿತ್ತು ಬಿಡದೆ ನಮ್ಮ ರಕ್ಷಿಸೋ
ಶ್ರೀ ಶ್ರೀನಿವಾಸ ।
ನಮ್ಮೊಡೆಯ ಶ್ರೀ ಪುರಂದರ ವಿಠಲರಾಯನೆ
ಶ್ರೀನಿವಾಸ ॥

## ಆನಂದ ಬಳಗದ ಕ್ಯಾಲೆಂಡರ್ 2019 ಬಿಡುಗಡೆ

**– ಪ್ರತಿಗಳನ್ನು ಪಡೆಯಲು ಕೋರಿಕೆ**

ಆನಂದ ಬಳಗದ ಯುವವಿಭಾಗವು ಕಳೆದ ಕೆಲವು ವರ್ಷಗಳಿಂದ ಕ್ಯಾಲೆಂಡರ್‌ಗಳನ್ನು ಮುದ್ರಿಸಿ ಸದಸ್ಯರಿಗೆ ಒದಗಿಸಿಕೊಡುತ್ತಿದೆ. ಬಳಗದ ಕೆಲವು ಉದಾರೀ ದಾನಿಗಳ ಪ್ರಾಯೋಜಕತ್ವದಲ್ಲಿ ಹೊರತರುತ್ತಿರುವ ಈ ಕ್ಯಾಲೆಂಡರ್ ಬಳಗಕ್ಕೆ ಉಪಯುಕ್ತವಾದ ಮಾಹಿತಿಗಳನ್ನು ಒಳಗೊಂಡು, ವಿಶೇಷವಾದ ವಿನ್ಯಾಸದೊಡನೆ ಪ್ರತಿವರ್ಷವೂ ಪ್ರಕಟಣೆಗೊಳ್ಳುತ್ತಿದೆ.


ಆನಂದ ಬಳಗದ ಕ್ಯಾಲೆಂಡರ್‌ಗಳು ಸದಸ್ಯರಿಗೆ ಹೊಸ ವರ್ಷ ಆರಂಭವಾಗುವ ಸಾಕಷ್ಟು ಮುಂಚಿತವಾಗಿ ಲಭ್ಯವಾಗುವ ದೃಷ್ಟಿಯಿಂದ ಬಳಗದ 2019ರ ಕ್ಯಾಲೆಂಡರ್‌ನ್ನು ದಿನಾಂಕ 8.12.2018ರ ಶನಿವಾರ ಸಂಜೆ 6 ಗಂಟೆಗೆ ಹೋಟೆಲ್ ಅಜಂತಾ ಆವರಣದಲ್ಲಿ ಬಿಡುಗಡೆ ಮಾಡಲಾಗುವುದು.

ಅಂದು ಬಿಡುಗಡೆಯಾದ ಕ್ಯಾಲೆಂಡರ್‌ಗಳ ಪ್ರತಿಗಳನ್ನು ಬಳಗದ ಎಲ್ಲಾ ಸದಸ್ಯರು ಈ ಕೆಳಗಿನ ವಿಳಾಸಗಳಲ್ಲಿ, ತಮ್ಮ ಸದಸ್ಯತ್ವ ಸಂಖ್ಯೆಯನ್ನು ನಮೂದಿಸಿ ಆದಷ್ಟು ಶೀಘ್ರದಲ್ಲಿ ಪಡೆದುಕೊಳ್ಳಬೇಕಾಗಿ ವಿನಂತಿ.

– ಎಂ. ಕೆ. ಪ್ರಸಾದ್, ಸಂಚಾಲಕರು, ಯುವವಿಭಾಗ

**ಕ್ಯಾಲೆಂಡರ್ 2019 ಲಭ್ಯವಿರುವ ವಿಳಾಸ :**

1. **ಆನಂದ ಬಳಗದ ಕಚೇರಿ, ಹೋಟೆಲ್ ಅಜಂತಾ, ಬೆಂಗಳೂರು – 560 001**
2. **ಕೃತಿ ಕನ್ಸಲ್ಟೆಂಟ್ಸ್, 204, 2ನೇ ಮೈನ್, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560 010**
3. **ಜಿ.ಎಸ್. ಪವರ್ ಸಿಸ್ಟಮ್ಸ್, 21, 3ನೇ ಕ್ರಾಸ್, 3ನೇ ಹಂತ, ಕಾಮಾಕ್ಯ ಸಿನೇಮಾ ಹತ್ತಿರ, ಕತ್ತರಿಗುಪ್ಪೆ, ಬೆಂಗಳೂರು – 85**
4. **ಎಂ.ಕೆ. ಪ್ರಸಾದ್, ಫ್ರೆಡ್ಜ್ ಹೌಸ್, ಆದಿತ್ಯ ಟವರ್ಸ್, ,23, ವಿ.ಎಸ್.ಎನ್. ರಸ್ತೆ, ಶಿವಾಜಿನಗರ, ಬೆಂಗಳೂರು – 560 001**


## ಬೃಂದಾವನ ಗೆಸ್ಟ್ ಹೌಸ್
## BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block,
Bhuvaneshwari Nagar
BSK 3rd Stage, Bangalore - 560 085
E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ.: ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್‌ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿ ನೀಡಲಾಗುವುದು.



ಶುಭಾಶಯಗಳನ್ನು ಕೋರುವವರು :



## ಉಡುಪಿ ಸ್ಟೋರ್ಸ್

ಗುಂಡೋಪಂತ ಬೀದಿ, ಮಾರ್ಕೆಟ್ ರಸ್ತೆ,
ಬೆಂಗಳೂರು - 560002

ಮನೆಗಳಿಗೆ, ದೇವಸ್ಥಾನಗಳಿಗೆ, ಹಾಗೂ
ಮಠಗಳಿಗೆ ಉಪಯುಕ್ತವಾದ ಪೂಜಾ ಸಾಮಗ್ರಿಗಳು,
ಉತ್ತಮ ದಾವಣಿ, ಮಗುಟ, ಮಡಿಪಂಚೆ,
ಗೋಪೀಚಂದನ, ಧಾರ್ಮಿಕ ಅಧ್ಯಾತ್ಮಿಕ ಪುಸ್ತಕಗಳು,
ಇಲ್ಲಿ ಸುಲಭ ದರದಲ್ಲಿ ದೊರೆಯುತ್ತದೆ.

ಸ್ಥಾಪಕರು : ದಿವಂಗತ ಟಿ. ಆರ್. ಕೇಕುಡ



ಶುಭಾಶಯಗಳನ್ನು ಕೋರುವವರು



|| ಹರಿಃ ಓಂ ||

## ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

**ಉಪಾಧ್ಯ ಆಯುರ್ವೇದ ಭಂಡಾರ**

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422


ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

# ದ.ಕ.ಸಂಘದಿಂದ ಕರಾವಳಿ ರತ್ನ ಪ್ರಶಸ್ತಿ ಪ್ರದಾನ

ದಕ್ಷಿಣ ಕನ್ನಡಿಗರ ಸಂಘವು ದಿ. 30.9.2018 ರಂದು ಹೋಟೆಲ್ ಅಜಂತಾದಲ್ಲಿ ಸಂಯೋಜಿಸಿದ್ದ ಸಮಾರಂಭದಲ್ಲಿ ಪ್ರಖ್ಯಾತ ನ್ಯಾಯವಾದಿ ಹಾಗೂ ಕರ್ನಾಟಕ ಸರ್ಕಾರದ ಅಡ್ವೊಕೇಟ್ ಜನರಲ್ ಶ್ರೀ ಉದಯ ಹೊಳ್ಳ, ಎಫ್.ಕೆ.ಸಿ.ಸಿ.ಐ.ನ ಅಧ್ಯಕ್ಷರಾದ ಶ್ರೀ ಸುಧಾಕರ್ ಎಸ್. ಶೆಟ್ಟಿ ಮತ್ತು ಖ್ಯಾತ ಹೋಟೆಲ್ ಉದ್ಯಮಿ ಶ್ರೀ ಎಸ್. ರಾಘವೇಂದ್ರ ರಾವ್‌ರವರಿಗೆ ಕರಾವಳಿ ರತ್ನ ಪ್ರಶಸ್ತಿ 2018ನ್ನು ಪ್ರದಾನ ಮಾಡಲಾಯಿತು. ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಶ್ರೀ ಪೇಜಾವರ ಮಠದ ಕಿರಿಯ ಸ್ವಾಮೀಜಿಯವರಾದ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀ ಪಾದಂಗಳವರು ವಹಿಸಿದ್ದರು. ಭಾರತ ಸರ್ಕಾರದ ಅಂಕಿ ಅಂಶಗಳು ಮತ್ತು ಯೋಜನಾ ಅನುಷ್ಠಾನ ಸಚಿವರಾದ ಮಾನ್ಯ ಶ್ರೀ ಡಿ.ವಿ.ಸದಾನಂದ ಗೌಡರವರು ಸಮಾರಂಭವನ್ನು ಉದ್ಘಾಟಿಸಿದರು. ಕರ್ನಾಟಕ ಬ್ಯಾಂಕ್‌ನ ಡೆಪ್ಯುಟಿ ಜನರಲ್ ಮ್ಯಾನೇಜರ್ ಶ್ರೀ ಪಿ. ಹೆಚ್. ರಾಜಕುಮಾರ್ ಮತ್ತು ಬೆಂಗಳೂರು ಪ್ರೆಸ್‌ಕ್ಲಬ್‌ನ ಅಧ್ಯಕ್ಷರಾದ ಶ್ರೀ. ಕೆ. ಸದಾಶಿವ ಶೆಣೈಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಇದೇ ಸಂದರ್ಭದಲ್ಲಿ 2018ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಯಲ್ಲಿ ಉತ್ತಮ ಅಂಕ ಪಡೆದ ಅವಿಭಜಿತ ದ.ಕ.ಜಿಲ್ಲೆಯ ಮೂಲದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಸಭಾಧ್ಯಕ್ಷತೆಯನ್ನು ದ.ಕ.ಸಂಘದ ಅಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯರವರು ವಹಿಸಿದ್ದರು. ಸಂಘದ ಉಪಾಧ್ಯಕ್ಷರಾದ



ಡಾ. ಕೆ.ಸಿ.ಬಲ್ಲಾಳ್ ಸ್ವಾಗತಿಸಿದರೆ, ಡಾ. ಉದಯಧರ್ಮಸ್ಥಳ ಸಂಘ ನಡೆದು ಬಂದ ದಾರಿ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಕೋಟೇಶ್ವರ ಸೂರ್ಯನಾರಾಯಣರಾವ್‌ರವರು ಕರಾವಳಿ ರತ್ನ ಪ್ರಶಸ್ತಿಯ ಹಿನ್ನೆಲೆಯನ್ನು ವಿವರಿಸಿದರೆ, ಪ್ರಧಾನ ಕಾರ್ಯದರ್ಶಿ ಶ್ರೀ ವೈ.ಜಯಂತರಾವ್ ಧನ್ಯವಾದ ಸಮರ್ಪಿಸಿದರು. ಸಮಾರಂಭದ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಯೋಜಿಸಲಾಗಿತ್ತು. ಪ್ರದಾನ ಸಮಾರಂಭದ ಮೊದಲಿಗೆ ಸಂಘದ ವಾರ್ಷಿಕ ಮಹಾ ಸಭೆಯೂ ಜರಗಿತ್ತು.

***

## "ಅಕ್ಕ" ಸಮ್ಮೇಳನದಲ್ಲಿ ಮಿಂಚಿದ ಡಾ॥ ಪುತ್ತೂರಾಯರು



ತಾ. 31.8.2018 ರಿಂದ 2.9.2018 ರವರೆಗೆ ಅಮೇರಿಕಾದ 'ಡಲ್ಲಾಸ್' ನಗರದಲ್ಲಿ "ಅಮೇರಿಕ ಕನ್ನಡ ಕೂಟಗಳ ಆಗರ (ಅಕ್ಕ)" ಸಂಸ್ಥೆಯವರು ಆಯೋಜಿಸಿದ್ದ 10ನೇ ವಿಶ್ವ ಕನ್ನಡ ಸಮ್ಮೇಳನದಲ್ಲಿ ಹರಟೆ, ಹಾಸ್ಯ ಕಲಾವಿದರಾಗಿ ಆಮಂತ್ರಿಸಲ್ಪಟ್ಟ ಸಾಹಿತಿ, ವಾಗ್ಮಿ ಹಾಗೂ ಚಿಂತಕರಾದ ಡಾ॥ ಕೆ.ಪಿ. ಪುತ್ತೂರಾಯರು ನಡೆಸಿಕೊಟ್ಟ "ಕಾಮಿಡಿ ಟೈಮ್ಸ್" ಅಪಾರವಾದ ಜನ ಮೆಚ್ಚುಗೆಯನ್ನು ಪಡೆಯಿತು. ತಿಳಿ ಹಾಸ್ಯದೊಂದಿಗೆ ಗಂಭೀರ ಚಿಂತನೆಗಳನ್ನೊಳಗೊಂಡ ಇವರ ಮಾತುಗಳು ಒಂದು ಗಂಟೆಗಳ ಕಾಲ ಸಭಿಕರನ್ನು ಹಿಡಿದಿಟ್ಟಿತ್ತು. ಮುಂದೆ ಶಿಕಾಗೋ ಮತ್ತು ಬ್ಲೂಮಿಂಗ್‌ಟನ್ ನಗರಗಳಲ್ಲೂ ಕಾರ್ಯಕ್ರಮವನ್ನು ನೀಡಿದ ಪುತ್ತೂರಾಯರಿಗೆ ಹಲವಾರು ಕಡೆಗಳಿಂದ ಆಮಂತ್ರಣಗಳು ಬಂದಿವೆ.

ಈ ವರ್ಷದ 'ಅಕ್ಕ' ವಿಶ್ವ ಕನ್ನಡ ಸಮ್ಮೇಳನವನ್ನು ಪುತ್ತಿಗೆ ಮಠಾಧೀಶರಾದ ಶ್ರೀ ಶ್ರೀ ಸುಗುಣೇಂದ್ರ ತೀರ್ಥರು ಉದ್ಘಾಟಿಸಿದುದು ನಮಗೆಲ್ಲಾ ಇನ್ನೊಂದು ಹೆಮ್ಮೆಯ ವಿಷಯ.

# ಜೀವನದಲ್ಲಿ ಯಶಸ್ಸು ಮತ್ತು ಸಮೃದ್ಧಿ–ವಿಚಾರ ಸಂಕಿರಣ

ಆನಂದ ಬಳಗದ ಯುವ ವಿಭಾಗವು ದಿನಾಂಕ 5.8.2018 ರಂದು ರಾಜಾಜಿನಗರದ ಅಭಿಮಾನಿ ಹೋಟೆಲ್‌ನಲ್ಲಿ ಜೀವನದಲ್ಲಿ ಯಶಸ್ಸು ಹಾಗೂ ಗ್ರೋ–ರಿಚ್ ಎಂಬ ವಿಚಾರ ಸಂಕಿರಣವೊಂದನ್ನು ಏರ್ಪಡಿಸಿತ್ತು. ಕಾಫಿ, ಟೀ–ಬಿಸ್ಕತ್‌ನೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದವ ರನ್ನು ಸ್ವಾಗತಿಸಲಾಯಿತು. ಶ್ರೀಮತಿ ಮಾಧವಿ ಬಲ್ಲಾಳ್‌ರವರ ನೇತೃತ್ವದಲ್ಲಿ 92 ಸದಸ್ಯರು ಸಂಕಿರಣಕ್ಕೆ ನೋಂದಣಿಯಾಗಿರುವುದು ಗಮನಾರ್ಹ ವಿಷಯ ವಾಗಿತ್ತು. ಕಾರ್ಯಾಗಾರದ ಮೊದಲಿಗೆ ಡಾ (ಶ್ರೀಮತಿ) ವೀಣಾಶರತ್, ಶ್ರೀಮತಿ ಮೀನಾ ಮಹಾಬಲೇಶ್ವರ, ಶ್ರೀಮತಿ ವಿಜಯಲಕ್ಷ್ಮಿ ಉಪಾಧ್ಯ ಹಾಗೂ ಶ್ರೀಮತಿ ನೈನಿ ಭಟ್‌ರವರು ಪ್ರಾರ್ಥನೆ ಮಾಡಿದರು.



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರೊ॥ ಕೆ. ಪಿ. ಪುತ್ತೂರಾಯ ಹಾಗೂ ಡಾ. ಎಸ್. ಎನ್. ಭರತ್ ಚಂದ್ರರವರು ಕಾರ್ಯದರ್ಶಿ ಶ್ರೀ ಎಸ್. ಹರಿದಾಸ ಉಪಾಧ್ಯ, ಕೋಶಾಧಿಕಾರಿ ಶ್ರೀ ವೈ. ರಾಧಾಕೃಷ್ಣ ಮತ್ತು ಸಂಚಾಲಕರಾದ ಶ್ರೀ ಎಂ. ಕೆ. ಪ್ರಸಾದ್ ರವರ ಸಮ್ಮುಖದಲ್ಲಿ ಜ್ಯೋತಿ ಬೆಳಗಿಸುವುದರ ಮೂಲಕ ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. ಬಳಗದ ಮಾಧ್ಯಮ ಮತ್ತು ಸಂವಹನ ವಿಭಾಗದ ಸಂಚಾಲಕರಾದ ಶ್ರೀ ಎಂ. ದಿನೇಶ್‌ರಾವ್‌ರವರು ಡಾ. ಪುತ್ತೂರಾಯರ ಪರಿಚಯ ಮಾಡಿದರು.

ಡಾ. ಪುತ್ತೂರಾಯರು ತಮ್ಮ ಉಪನ್ಯಾಸದಲ್ಲಿ ಸಂಸಾರದಲ್ಲಿ ಗೆಲುವಿನ ಹಾದಿ ಹಿಡಿಯುವುದು ಹಾಗೂ ನಡೆಸಿಕೊಂಡು ಹೋಗುವುದು ಹೇಗೆ ಎಂದು ಬಹಳ ಸರಳ ಹಾಗೂ ಸೊಗಸಾದ ರೀತಿಯಲ್ಲಿ ವಿವರಿಸಿದರು. ಸಂಸಾರದೊಳಗಿರುವ ವಿರಸವನ್ನು ಪರಿಹರಿಸಿ, ಒಡಕು ತೊಡಕುಗಳನ್ನು ನಿವಾರಿಸಿ ಜೀವನದಲ್ಲಿ ಸರಸವನ್ನು ಉಂಟುಮಾಡುವುದೇ ಯಶಸ್ಸಿನ ಗುಟ್ಟು ಎಂದು ಮನದ ಆಳಕ್ಕೆ ಅರ್ಥವಾಗುವ ಹಾಗೆ ಹೇಳಿಕೊಟ್ಟರು. ಉಪನ್ಯಾಸದ ನಂತರ ಸದಸ್ಯರು ತಮ್ಮ ತಮ್ಮ ಸಂಶಯಗಳನ್ನು ಡಾ ಪುತ್ತೂರಾಯರ ಮುಂದಿಟ್ಟರು. ಅದಕ್ಕೆ ಅವರು ಸೂಕ್ತ ಸಲಹೆಗಳನ್ನು ಕೊಟ್ಟರು. ಇದಾದ ನಂತರ ಭೋಜನದ ವ್ಯವಸ್ಥೆಯಾಗಿತ್ತು. ಆನಂತರ ಡಾ. ಭರತ್ ಚಂದ್ರರವರಿಂದ ಗ್ರೋ–ರಿಚ್ ಕಾರ್ಯಕ್ರಮವು ಶುರು ಆಯಿತು.

ಭೋಜನದ ನಂತರ ಎಲ್ಲರಿಗೆ ನಿದ್ದೆಯ ಮಬ್ಬು ಇರುವುದು ಸಹಜವೇ ಆದರೆ ಡಾ. ಭರತ್ ಚಂದ್ರ ಮೈಕನ್ನು ಹಿಡಿದಿದ್ದೆ ತಡ ಎಲ್ಲರ ಕಿವಿ ಅರಳಿತು, ಏಕೆಂದರೆ ವಿಷಯವೇ ಹಾಗಿತ್ತು, ಎಲ್ಲರಿಗೂ ಬೇಕಾದ ವಿಷಯ ತಮ್ಮ ಬಳಿರುವ ದುಡ್ಡನ್ನು ದ್ವಿಗುಣ, ತ್ರಿಗುಣಗೊಳಿಸುವುದು. ಡಾ. ಭರತ್‌ರವರು ಶೇರು ಮಾರುಕಟ್ಟೆಯಲ್ಲಿ ಎಲ್ಲರೂ ಮಾಡಲೇಬೇಕಾದ ಹೂಡಿಕೆ ಯಾವ ಯಾವ ರೀತಿಯಲ್ಲಿ ಯಾರ್‍ಯಾರು ಹೇಗೆ ಎಷ್ಟು ಮಾಡಬೇಕು ಎಂದು ಎಲ್ಲಾ ವಿವರಗಳನ್ನು ಹೇಳಿಕೊಟ್ಟರು. ಹಾಗೆಯೇ ಶೇರು ಮಾರುಕಟ್ಟೆಯನ್ನು ಸರಿಯಾಗಿ ಅಧ್ಯಯನ ಮಾಡಿದರೆ ಕಮ್ಮಿ ಸಮಯದಲ್ಲಿ ಹೇಗೆ ಬಹಳ ಲಾಭ. ಪಡೆಯಬಹುದು (ಆದರೆ ರಿಸ್ಕ್ ಫ್ಯಾಕ್ಟರ್‌ನ್ನು ಗಮನದಲ್ಲಿ ಇಟ್ಟುಕೊಂಡು) ಮತ್ತು ದೀರ್ಘ ಕಾಲದ ಬಂಡವಾಳದಿಂದ ಆಗುವ ಲಾಭಗಳನ್ನು ತಿಳಿಯಪಡಿಸಿದರು. ಕಾರ್ಯಕ್ರಮದ ಕೊನೆಗೆ ಎಲ್ಲರೂ ತಮ್ಮ ತಮ್ಮ ಸಂಶಯಗಳನ್ನು ಕೇಳಿದರು ಹಾಗೆಯೇ ಅವರಿಗೆ ಬೇಕಾದ ಸೂಕ್ತ ಸಲಹೆಗಳು ಡಾ. ಭರತ್‌ರವರಿಂದ ಒದಗಿ ಬಂತು. ಇದಾದ ನಂತರ ಯುವವಿಭಾಗದ ಖಜಾಂಚಿಗಳಾದ ಶ್ರೀ ಗೋಪಾಲಕೃಷ್ಣ ರವರು ಇಬ್ಬರು ಗಣ್ಯರುಗಳನ್ನು ಮತ್ತು ಕಾರ್ಯಕ್ರಮದ ಪ್ರಾಯೋಜಕರನ್ನು ಗೌರವಿಸಿದರು. ಆನಂದ ಬಳಗದ ವತಿಯಿಂದ ಶ್ರೀ ಹರಿದಾಸ್ ಉಪಾಧ್ಯಾಯರು ಕಾರ್ಯಕ್ರಮದ ಅಂಶಗಳನ್ನು ಹೇಳುತ್ತಾ ಇಂತಹ ಅತ್ಯುತ್ತಮವಾದ ವರ್ಕ್‌ಷಾಪ್‌ನ್ನು ಆಗಾಗೆ ಮಾಡಬೇಕಾಗಿ ಕೋರಿಕೊಂಡರು. ಕೊನೆಯದಾಗಿ ಯುವ ವಿಭಾಗದ ಕಾರ್ಯದರ್ಶಿಯಾದ ಶ್ರೀ ರಾಜೇಶ್‌ರವರು ವಂದನಾರ್ಪಣೆ ಮಾಡಿದರು.

**ವರದಿ – ಶ್ರೀಶ ಬಲ್ಲಾಳ್**

*With Best Compliments From :*

# M. BHASKAR RAO



## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

ಶುಭಾಶಯಗಳೊಡನೆ,

# ಬಿ.ಗಣಪತಿ ಹೆಬ್ಬಾರ್



## ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ , ಫೋರ್ಟ್,
ಬೆಂಗಳೂರು 560 002
ಮೊಬೈಲ್ : 99724 29854

ಶುಭಾಶಯಗಳೊಡನೆ,

**ಕೋಟೇಶ್ವರ ಸೂರ್ಯನಾರಾಯಣ ರಾವ್**
ಸಾಹಿತ್ಯ ಸಮಾಜ ಸೇವೆ

ಪ್ರಶಸ್ತಿ ಪುರಸ್ಕೃತ
ಡಿವಿಜಿ ಪ್ರಶಸ್ತಿ, ಧರ್ಮಭೂಷಣ, ಆರ್ಯಭಟ
ಕರ್ನಾಟಕ ಭೂಷಣ, ಪ್ರಜ್ಞಾಪೀಠ ಪ್ರಶಸ್ತಿ,
ಶ್ರೀ ಕೃಷ್ಣಕೃಪಾ ಪ್ರಶಸ್ತಿ, ಆದರ್ಶ ಸಮಾಜ ರತ್ನ

**ಕೋಟೇಶ್ವರ ಸೂರ್ಯನಾರಾಯಣ ರತ್ನ ಟ್ರಸ್ಟ್ ರಿ.**
ಅಧ್ಯಕ್ಷರು

ಉದ್ಯಮ :

**ಮಹಾಲಕ್ಷ್ಮೀ ಫ್ಯಾನ್ಸಿ ಸ್ಟೋರ್ಸ್**
21/2, ಕೋಟೇಶ್ವರ ರಸ್ತೆ, ಡಿವಿಜಿ ಅಡ್ಡರಸ್ತೆ, ಬಸವನಗುಡಿ
ಬೆಂಗಳೂರು – 04
ದೂರವಾಣಿ :
ಉದ್ಯಮ : 26675378, ಮನೆ : 26624163
ಸಹಯೋಗ : ಕೆ.ಎಸ್. ರಮೇಶ್

# ಕಬ್ಬನ್ ಪಾರ್ಕ್‌ನಲ್ಲಿ ಮುಂಜಾವಿನ ನಡಿಗೆ



ಬೆಂಗಳೂರಿನ ಅತ್ಯಂತ ಪ್ರಮುಖ ಉದ್ಯಾನವನ ಕಬ್ಬನ್ ಪಾರ್ಕ್ ನಡಿಗೆ ಪ್ರಿಯರಿಗೆ, ಓಟಗಾರರಿಗೆ, ಯೋಗ ಪಟುಗಳಿಗೆ, ಕಲಾ ಪ್ರದರ್ಶಕರಿಗೆ ಪ್ರಿಯವಾದ ತಾಣ. ಈ ಸುಂದರವಾದ ತಾಣದಲ್ಲಿ, ಆನಂದ ಬಳಗ ಯುವ ವಿಭಾಗದ ಸಂಚಾಲಕರಾದ ಶ್ರೀ ಕೃಷ್ಣ ಪ್ರಸಾದ್ ರವರು, ಬಳಗದ ಸದಸ್ಯರಿಗೆ ತಾ 26.08.2018 ರಂದು "ಮುಂಜಾವಿನ ನಡಿಗೆ" ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಈ ಉದ್ಯಾನವನ್ನು ಈಗ "ಶ್ರೀ ಜಯಚಾಮರಾಜೇಂದ್ರ ಉದ್ಯಾನವನ" ಎಂದು ಮರು ನಾಮಕರಣ ಮಾಡಲಾಗಿದೆ. ಸುಮಾರು 300 ಎಕರೆ ವಿಸ್ತೀರ್ಣದಲ್ಲಿ ಹಬ್ಬಿರುವ ಈ ಉದ್ಯಾನವನ ಬೆಂಗಳೂರಿನ ಹೆಮ್ಮೆಯ ತಾಣವಾಗಿದೆ.

ಪೂರ್ವ ನಿಗದಿತವಾದಂತೆ, ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದ ಬಳಿಯಿಂದ, ಬೆಳಿಗ್ಗೆ 6.50ಕ್ಕೆ, ತುಂಬು ಉತ್ಸಾಹದಿಂದ, ಸುಮಾರು 23 ಸದಸ್ಯರ ತಂಡದ ನಡಿಗೆ ಪ್ರಾರಂಭವಾಯಿತು. ಮುಂಜಾನೆಯ ತಂಪಾದ ಗಾಳಿಗೆ ಮುದಗೊಂಡ ಮನದಿಂದ, ಪ್ರಕೃತಿಯ ಹಚ್ಚ ಹಸಿರಿನ ಸೌಂದರ್ಯವನ್ನು ಕಣ್ಣಲ್ಲಿ ಆಸ್ವಾದಿಸುತ್ತಾ, ನಾವು ಮುಂದುವರೆದೆವು. ಸರ್ ಎಡ್ವರ್ಡ ಮೂರ್ತಿ, ಪ್ರೆಸ್ ಕ್ಲಬ್ ಹಾಗೂ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಹೊರ ಆವರಣವನ್ನು ನೋಡಿಕೊಂಡು, ಬಿದಿರಿನ ಗಿಡಗಳ ಸುಂದರ ತಾಣವನ್ನು ಪ್ರವೇಶಿಸಿದೆವು. ಅಲ್ಲಿ ಸ್ವಲ್ಪ ಹೊತ್ತು ನಿಂತು, ಸಂಗೀತದಂತೆ ಉಲಿವ ಪಕ್ಷಿಗಳ ಸ್ವರವನ್ನು ಕಿವಿಗೊಟ್ಟು ಕೇಳಿದೆವು.

ಈ ಉದ್ಯಾನವನದಲ್ಲಿ ಸುಮಾರು 96 ಜಾತಿಯ, 6000 ಸಸ್ಯ ಸಂಕುಲಗಳಿವೆ ಹಾಗೂ ಇದು ಅನೇಕ ಪಕ್ಷಿಗಳ ವಾಸ್ತವ್ಯ ತಾಣವಾಗಿದೆ ಎಂದು ಶ್ರೀ ಪ್ರಸಾದ್ ರವರಿಂದ ತಿಳಿದುಕೊಂಡು, ನಮ್ಮ ನಡಿಗೆ ಮುಂದುವರೆಸಿದೆವು. ಪುಟ್ಟ ಕಬ್ಬಿಣದ ಸೇತುವೆಯ ಮೇಲೆ ನಡೆದು, ಉಚ್ಚ ನ್ಯಾಯಾಲಯದ ಬಳಿ ತಲುಪಿ, ಅಲ್ಲಿಂದ ವಿಧಾನ ಸೌಧವನ್ನು ನೋಡಿ, ಮುಂದುವರೆದೆವು. ಕಬ್ಬನ್ ಪಾರ್ಕಿನಲ್ಲಿ ಏರ್ಪಡಿಸಿದ್ದ ಸೈಕಲ್ ಡೇಯಲ್ಲಿ ಭಾಗವಹಿಸಿದ ಸೈಕಲ್ ಸವಾರರನ್ನು, ಅಲ್ಲಲ್ಲಿ ನಡೆದಾಡುವ, ವ್ಯಾಯಾಮ ಮಾಡುವ, ಜನರನ್ನು ನೋಡುತ್ತಾ, ನಮ್ಮ ಮಾತಿನ ಧ್ವನಿಯ ತರಂಗಗಳನ್ನು ಪಾರ್ಕಿನಲ್ಲಿ ಪಸರಿಸುತ್ತಾ, ಮಧ್ಯೆ ಮಧ್ಯೆ ಛಾಯಾಚಿತ್ರಗಳನ್ನು ತೆಗೆದುಕೊಂಡು, ನಾವು ಕೇಂದ್ರ ಪುಸ್ತಕ ಸಂಗ್ರಹಾಲಯ ತಲುಪಿದೆವು. ಕೇಂದ್ರ ಪುಸ್ತಕ ಸಂಗ್ರಹಾಲಯದಲ್ಲಿ ಸುಮಾರು ಎರಡು ಲಕ್ಷಕ್ಕೂ ಹೆಚ್ಚಿನ ಪುಸ್ತಕಗಳು ಇದೆಯೆಂಬ ವಿಷಯ ತಿಳಿದು ಸಂತೋಷವಾಯಿತು. ಅಲ್ಲಿಂದ ಮುಂದೆ ಸಾಗಿದಾಗ, ಪಕ್ಕದಲ್ಲಿ ಸಾವಯವ ಹಣ್ಣು, ತರಕಾರಿಗಳ ಮಾರಾಟದ ಗಾಡಿಗಳನ್ನು ಕಂಡು, ಸ್ವಲ್ಪ ಹಣ್ಣುಗಳ ಖರೀದಿಯನ್ನೂ ಮಾಡಿದೆವು.

ಆ ಮೇಲೆ ಮಾಸ್ಟರ್ ಸಂಹಿತ್ ಕುಂಜತ್ತಾಯ ರವರಿಂದ, ನಡಿಗೆ ಮತ್ತು ಯೋಗಾಭ್ಯಾಸದ ಬಗ್ಗೆ ಉಪಯುಕ್ತ ಮಾಹಿತಿ ತಿಳಿದು ಕೊಂಡೆವು. ಜೀವನ ಪರ್ಯಂತ ಮಾಡ ಬಹುದಾದ ವ್ಯಾಯಾಮ ಯೋಗ ಎಂದು ಹೇಳಿದ ಸಂಹಿತ್ ರವರು, ನಮ್ಮಿಂದ ಕೆಲವು ಯೋಗಾಸನಗಳನ್ನು ಮಾಡಿಸಿದರು. ಬಳಿಕ ನಮ್ಮ ನಡಿಗೆ ಮುಂದುವರೆಯಿತು. ಪರಸ್ಪರ ಮಾತಾಡುತ್ತಾ, ಕಬ್ಬನ್ ಪಾರ್ಕಿನ ಬಾಲ ಭವನದ ಗೇಟ್ ತಲುಪಿದಾಗ, ಗಂಟೆ ಸುಮಾರು 8 ಆಗಿತ್ತು. ಕಬ್ಬನ್ ಉದ್ಯಾನವನದ ಸೌಂದರ್ಯ ಆಸ್ವಾದಿಸುತ್ತಾ, ಮಾತಾಡುತ್ತಾ, ಸಾಗಿದ ನಮಗೆ, ನಮ್ಮ "ನಡಿಗೆ ಕಾರ್ಯಕ್ರಮ" ಮುಕ್ತಾಯ ಹಂತಕ್ಕೆ ಬಂದದ್ದು ಅರಿವಾಗಲೇ ಇಲ್ಲ. ಅರಿವಾದಾಗ ಹಸಿವು ಮೆಲ್ಲನೆ ತನ್ನ ಇರವನ್ನು ತಿಳಿಸಲಾರಂಬಿಸಿತ್ತು.

ಶ್ರೀಯುತ ಪ್ರಸಾದ್ ರವರು ನಮಗೆ ಉಪಾಹಾರದ ವ್ಯವಸ್ಥೆಯನ್ನು, ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಕ್ಯಾಂಟೀನಿನಲ್ಲಿ ಏರ್ಪಡಿಸಿದ್ದರು. ಶುಚಿ, ರುಚಿಯಾದ ಉಪಹಾರವನ್ನು ಸೇವಿಸಿ, ಉಪಾಹಾರದ ಖರ್ಚು ವೆಚ್ಚವನ್ನು ಎಲ್ಲರೂ ಹಂಚಿಕೊಂಡೆವು. ಬಳಿಕ ಚಿನ್ನಸ್ವಾಮಿ

ಕ್ರೀಡಾಂಗಣವನ್ನು ವೀಕ್ಷಿಸಿ, ಹೊರ ಬರುವಾಗ ಗಂಟೆ ಹತ್ತಾಗಿತ್ತು, ಮನೆಗೆ ಹೊರಡುವ ಹೊತ್ತಾಗಿತ್ತು. "ಮುಂಜಾವಿನ ನಡಿಗೆ "ಕಾರ್ಯಕ್ರಮವನ್ನು ಸುಂದರವಾಗಿ ಆಯೋಜಿಸಿದ್ದ, ಶ್ರೀ ಪ್ರಸಾದ್ ರವರಿಗೆ ಧನ್ಯವಾದಗಳನ್ನು ಹೇಳಿ, ನಮ್ಮ ನಮ್ಮ ಮನೆಗೆ ತೆರಳುವಾಗ ಮನ ಸಂತಸದಿಂದ ಅರಳಿತ್ತು. ಪುನಃ ಇದೇ ರೀತಿ, ಬಳಗದ ಮುಂಬರುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮನದಲ್ಲಿ ಯೋಜನೆ ನಡೆದಿತ್ತು.

**ಲೇಖನ: ಶ್ರೀಮತಿ ಸುಜಾತ ರಮೇಶ್**

# ಏಕವಿಂಶತಿ ದೇವಿ ಸ್ತುತಿ

ಶರನ್ನವರಾತ್ರಿಯ ಪರ್ವಕಾಲದಲ್ಲಿ ತಲಪಾಡಿ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ಬಗ್ಗೆ ವಿಶೇಷವಾಗಿ ರಚಿಸಿದ ದೇವಿಸ್ತುತಿ. (ಪ್ರತಿ ಸಾಲಿನ ಮೊದಲಕ್ಷರಗಳನ್ನು ಓದಿ)

**ತಕ್ಷಣ ಸ್ಪಂದಿಸುವ ದೇವಿ ಶ್ರೀಮಾತೆ**
**ಲವಲವಿಕೆ ಆರೋಗ್ಯಭಾಗ್ಯ ನೀಡುವಾಕೆ**
**ಪಾಪಗಳ ಪರಿಹರಿಸಿ ಪುಣ್ಯಕವಚ ದಾತೆ**
**ಡಿಂಡಿಮವ ಬಾರಿಸಿ ಪೂಜಿಸಲ್ಪಡುವ ಈಕೆ ॥1॥**

**ದೇವ ದೇವತೆಗಳ ಸಂಕಷ್ಟವ ಪರಿಹರಿಸಿದಾಕೆ**
**ವಿಮಲ ಚರಿತೆ ಲೋಕಮಾತೆ**
**ಪುರಕ್ಕೆಲ್ಲ ಶ್ರೀರಕ್ಷೆ ನೀಡುವಾಕೆ**
**ರಮ್ಯಕಪರ್ದಿನಿ ಮಹಿಪಮರ್ದಿನಿ ಈಕೆ ॥2॥**

**ಶ್ರೀಸೂಕ್ತಪ್ರಿಯೆ, ದೇವಿ ಮಹಾತಾಯಿ**
**ದುರಿತಗಳ ದೂರಮಾಡುವ ಈ ತಾಯಿ**
**ಗಾರ್(ರ)ನ ಪ್ರಿಯೆ ಭಗವತಿ ಪನ್ನಗವೇಣಿ**
**ಪರ್ವತಪುತ್ರಿ ಪಾರ್ವತಿ ಕನ್ಯಾಮಣಿ**
**ರಕ್ತಾಕ್ಷಿ ರುದ್ರಪ್ರಿಯೆ ಶ್ರೀಭವಾನಿ**
**ಮೇಖಿಲಾಂಕಿತೆ ಅಮ್ಮ ಕನ್ಯಾಕುಮಾರೀ**
**ಶ್ವರ ಪ್ರಿಯೆ ಈಶ್ವರಿ ದೇವಿ, ಸ್ಕಂದಮಾತೆ**
**ರಿಪುಹಂತ್ರಿ ದುರ್ಗೆ, ಪಾಪಹಾರಿಣಿ ॥3॥**

**ಅಂಬೆಗೆ ಜಗದಂಬೆಗೆ ಭವತಾರಿಣಿಗೆ**
**ಮ್ಮಮತೆಯ ಮಾತೆಗೆ, ಜಗನ್ಮಾತೆಗೆ**
**ನಮ್ಮೆಲ್ಲರ ಸಲಹುವ ಮಹಾದೇವಿಗೆ**
**ವರವ ನೀಡುವ ಈ ಸಿಂಹವಾಹಿನಿಗೆ**
**ರುಂಡವ ಬಾಗಿ ನಮಿಸೋಣ ಬನ್ನಿ, ಶ್ರೀದೇವಿಗೆ ॥4॥**

**ಡಾ॥ ಶ್ರೀ ವೆಂಕಟರಮಣ, ತಲಪಾಡಿ**

# ಕಬ್ಬನ್‌ಪಾರ್ಕ್‌ನಲ್ಲಿ ಮಾರ್ನಿಂಗ್ ವಾಕ್

ಪ್ರತಿಭಾ ಪ್ರಕೃತಿಯ ಮಡಿಲಲ್ಲಿ
ಈ ನಿಲ್ಲದ ಹನಿ ಹನಿ ಮಳೆಯಲ್ಲಿ ಪ್ರಾಣಿ ಪಕ್ಷಿಗಳ
ಕಲರವದಲ್ಲಿ ನಿಸರ್ಗದ ಬಾಗಿಲು
ತೆರೆದಿದೆ ಕಬ್ಬನ್ ಪಾರ್ಕಿನಲ್ಲಿ ॥ ೧ ॥

ಪ್ರಸಾದರ ಕಬ್ಬನ್ ಪಾರ್ಕಿನ ವಿವರಣೆಯಲ್ಲಿ
ರಾಜೇಶರ ಛಾಯಾಗ್ರಹಣದಲ್ಲಿ
ತೋಲ್ಪಾಡಿಯವರ ಚುಟುಕುಗಳಲ್ಲಿ
ಮೀನರಾವರ ಬಿರುಸಾದ ನಡಿಗೆಯಲ್ಲಿ
ಮೈಮರೆತೆವು ನಾವೆಲ್ಲ ಮೈಮನಗಳಲ್ಲಿ ॥ ೨ ॥

ಸಂದೀಪರ ನಗು ಮುಖದಲ್ಲಿ
ಗುರುರಾಜರವರ ವೈದ್ಯಕೀಯ ಸಲಹೆಯಲ್ಲಿ
ಮಹಾಬಲೇಶ್ವರ ಅವರ ಕಾನೂನಿನ ಅನುಭವಗಳಲ್ಲಿ
ವಸಂತಭಟ್ಟರವರ ನೆನಪಿನ ಸುರುಳಿಯಲ್ಲಿ,
ಮಕ್ಕಳಾದ ಆಶೀಶ್, ಸುಹಾಸ್, ಅನಿಶ್ ಹಾಗೂ
ಕಾಂಚನರೊಡನೆ ನಕ್ಕು ನಲಿದೆವು
ನೆನಪಿನಂಗಳದಲ್ಲಿ ॥ ೩ ॥

ನೈನಿಯವರ ಸೌಂದರ್ಯದ ರಹಸ್ಯದಲ್ಲಿ
ಮೋಹಿನಿಯವರ ಮಾತಿನ ಮೋಡಿನಲ್ಲಿ
ಲತಾರವರ ಚುರುಕಿನ ಮಾತುಗಳಲ್ಲಿ
ಸುನಿತಾರವರ ಘನತೆಯ ಮಾತುಗಳಲ್ಲಿ
ತಿರುಗಿದೆವು ನಾವು ಕಬ್ಬನ್ ಪಾರ್ಕಿನಲ್ಲಿ ॥ ೪ ॥

ಚಂದ್ರಿಕಾರವರ ಅತ್ಯಾದುನಿಕ ಶೈಲಿಯಲ್ಲಿ
ನಿವೇದಿತಾರವರ ಕ್ರೀಡಾಭಾವದ ಹುಮ್ಮಸ್ಸಿನಲ್ಲಿ
ಬಾಲಕೃಷ್ಣರವರ ಸೊಗಸಾದ ಮುಗುಳುನಗೆಯಲ್ಲಿ
ಗೋಪಾಲಕೃಷ್ಣರ ಮಧುರವಾದ ಸಂಗೀತದ ಲಹರಿಯಲ್ಲಿ
ವಿವಿಧ ವಿಷಯಗಳನ್ನರಿತೆವು
ನಾವು ನಡಿಗೆಯ ಜೊತೆಯಲ್ಲಿ ॥ ೫ ॥

ಕೊನೆಯದಾಗಿ ಕೆ.ಎಸ್.ಸಿ.ಎ. ಕ್ರೀಡಾಂಗಣದಲ್ಲಿ
ಕ್ಲಿಕ್ಕಿಸಿದ ಸೆಲ್ಫಿಯಲ್ಲಿ,
ರುಚಿಕರವಾದ ಲಘು ಉಪಹಾರದಲ್ಲಿ
ಯುವ ವಿಭಾಗದ ಕಬ್ಬನ್ ಪಾರ್ಕಿನ
ನಡಿಗೆಯು ಕೊನೆಗೊಂಡಿತಲ್ಲಿ
ಅಮಿತಾರವರ ಕುಂಚದ ಬರವಣಿಗೆಯು
ಮುಗಿಯಿತಲ್ಲಿ ॥ ೬ ॥

**- ಅಮಿತ ಡಿ. ರಾವ್**

*With Best Compliments from :*

## ಹೋಟೆಲ್ ಶೀತಲ್

ಆನಂದರಾವ್ ವೃತ್ತ, ಬೆಂಗಳೂರು – 560 009

**HOTEL**
**Sheethal**

#32/12, Sheshadri Road,
Ananda Rao Circle,
Bangalore - 560 009
Ph : 41139560 - 64
Mobile : 98457 77381



**Sheethal**
**Residency**

# 3/1, Old Sawar Lane, Sheshadri Road
Near Sangolli Rayanna Circle,
Bangalore - 560 009
Ph : 080 2234 3777 / 80 / 81
email : info@sheetalresidency.com
URL : www.sheetalresidency.com

ಎ. ಪ್ರಭಾಕರ ರಾವ್ ಮ್ಯಾನೇಜಿಂಗ್ ಪಾರ್ಟ್ನರ್

*With Best Compliments from :*

## MOOLA TOOLS LLP
## MOOLA TECHNOLOGIES (P) LIMITED
## ERKADI SYSTEMS

***Manufacturers of Ventilators, Monitors, Operation room equipments, Anaesthesia Machines and other equipments.***

# 109, Electronic City, 1st Phase, Hosur Road,
Bangalore - 560 100
Tel : 080 - 2852 2442, 2852 2443,
Fax : 080 - 2852 2441
***Email : sales@erkadi.com***

**K.Y. Ashok Murthy**
Managing Director



# ಸುದ್ಧಿ ಸಂಗ್ರಹ

☞ ಬಳಗದ ಪೋಷಕ ಸದಸ್ಯರಾದ ಶ್ರೀಮತಿ ಸರೋಜಾ ಮತ್ತು ಶ್ರೀ ಕೆ. ನಾರಾಯಣ ತಂತ್ರಿ ಹಾಗೂ ಶ್ರೀಮತಿ ಮಾಲತೀ ಮತ್ತು ಶ್ರೀ ಕೃಷ್ಣಮೂರ್ತಿ ಇನ್ನಂಜೆ ಇವರ ಮೊಮ್ಮಗ (ಶ್ರೀಮತಿ ಜ್ಯೋತಿ ಮತ್ತು ಶ್ರೀ ರಾಘವೇಂದ್ರ ಎನ್ ರವರ ಸುಪುತ್ರ) ಚಿ॥ ಅನುರಾಗ್ ಎಂಬ ವಟುವಿನ ಬ್ರಹ್ಮೋಪದೇಶವು ದಿ. 21.6.2018 ರಂದು ಮಲ್ಲೇಶ್ವರದ ಹವ್ಯಕ ಸಭಾ ಭವನದಲ್ಲಿ ವಿದ್ಯುಕ್ತವಾಗಿ ನೆರವೇರಿತು. ಶ್ರೀ ಪೇಜಾವರ ಮಠಾಧೀಶರಾದ ಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರು ಆಗಮಿಸಿ ವಟುವನ್ನು ಆಶೀರ್ವದಿಸಿದರು.

☞ ಬಳಗದ ಕ್ರಿಯಾಶೀಲ ಸದಸ್ಯ ದಂಪತಿಗಳಾದ ಶ್ರೀ ರಾಘವೇಂದ್ರ ಭಟ್ ಮತ್ತು ಶ್ರೀಮತಿ ಜ್ಯೋತಿ ಭಟ್‌ರವರ ಸುಪುತ್ರ ಚಿ॥ ಪ್ರದ್ಯುಮ್ನನ ಉಪನಯನ ದಿ. 1.7.2018 ರಂದು ಜಯರಾಮ ಸೇವಾ ಮಂಡಳಿಯಲ್ಲಿ ನೆರವೇರಿದೆ. ಉಪನಯನದ ಅಂಗವಾಗಿ ಅದೇ ದಿನ ಸಂಜೆ ಈ ದಂಪತಿಗಳ ಸುಪುತ್ರಿ ಕು. ದೀಕ್ಷಾ ಭಟ್ ಶ್ರೀಕೃಷ್ಣನಾಗಿ ಅಭಿನಯಿಸಿದ ಶ್ರೀ ಕೃಷ್ಣಲೀಲೆ ಕಂಸವಧೆ ಎಂಬ ಯಕ್ಷಗಾನವೂ ಪ್ರದರ್ಶಿತವಾಗಿದೆ.


☞ ಬಳಗದ ಪೋಷಕರಾದ ಶ್ರೀಮತಿ ಜಾಹ್ನವಿ ಶಾಸ್ತ್ರಿಯವರ ಮೊಮ್ಮಗಳು (ಶ್ರೀ ರವೀಂದ್ರ ಶಾಸ್ತ್ರಿ ಮತ್ತು ಶ್ರೀಮತಿ ಶ್ರೀ ಲಕ್ಷ್ಮಿಯವರ ಸುಪುತ್ರಿ) ಸೌ. ಮಾನಸಾ ಇವರ ಮದುವೆ ಶ್ರೀ ಭರತ್‌ರಾಜ್ ದಂಪತಿಗಳ ಪುತ್ರ ಚಿ॥ ಸಾಗರ್ ಜೊತೆ ದಿ. 1.7.2018 ರಂದು ಬೆಂಗಳೂರು ಅರಮನೆ ಮೈದಾನದ ಗಾಯತ್ರಿ ವಿಹಾರದ ವೃಕ್ಷ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ಜರಗಿದೆ.




ಯೋಗ ಗುರು ಹಾಗೂ ಸಾಧಕಿ ಶ್ರೀಮತಿ ಪ್ರವೀಣಾ ಗೋಪಾಲಕೃಷ್ಣರವರಿಗೆ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಯೋಗ ಚಾಂಪಿಯನ್‌ಶಿಪ್ – 2018 ರಲ್ಲಿ ಯೋಗ ಕಲಾ ಸಾಧಕ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಈಗಾಗಲೇ ಯೋಗರತ್ನ, ಯೋಗ ಕಲಾ ಸಾಧಕರತ್ನ, ಯೋಗ ವಿಶಾರದ, ಯೋಗಾಚಾರ್ಯ ಮೊದಲಾದ ಪ್ರಶಸ್ತಿಗಳನ್ನು ಪಡೆದಿರುವ ಶ್ರೀಮತಿ ಪ್ರವೀಣಾರವರಿಗೆ ಅಭಿನಂದನೆಗಳು.

## ಕೆಂಪೇಗೌಡ ಪ್ರಶಸ್ತಿ 2018





☞ ಆನಂದ ಬಳಗದ ಸಕ್ರಿಯ ಸದಸ್ಯರು, ಜನಪ್ರಿಯ ಯೋಗ ಗುರು ಹಾಗೂ ನೆಮ್ಮದಿ ವಿಶ್ರಾಂತಿ ಧಾಮದ ರೂವಾರಿ ಶ್ರೀ ಪಿ.ಸಿ. ಮುಕುಂದ ರಾವ್ ಮತ್ತು ಖ್ಯಾತ ನ್ಯಾಯವಾದಿ ಹಾಗೂ ಬಹು ಬೇಡಿಕೆಯ ಮಧ್ಯಸ್ಥಿಕೆದಾರರಾದ ಶ್ರೀ ಎಸ್. ಎನ್. ಪ್ರಶಾಂತ್ ಚಂದ್ರ ಇವರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2018 ರ ಕೆಂಪೇಗೌಡ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿದೆ. ಈ ಪ್ರತಿಷ್ಠಿತ ಪ್ರಶಸ್ತಿ ಪುರಸ್ಕೃತರಿಬ್ಬರಿಗೂ ಹಾರ್ದಿಕ ಅಭಿನಂದನೆಗಳು.



☞ ಬಳಗದ ಸಾರ್ವಜನಿಕ ಸಂಪರ್ಕ ವಿಭಾಗದ ಸಂಚಾಲಕಾಗಿರುವ ಶ್ರೀ ಕೆ.ಎನ್. ಅಡಿಗ ಅಡೂರು ರವರಿಗೆ ಚೆನ್ನೈನ ಇಂಡಿಯನ್ ವರ್ಚುವಲ್ ಯುನಿವರ್ಸಿಟಿ ಫಾರ್ ಪೀಸ್ ಎಂಡ್ ರೀಸರ್ಚ್ – ಗೌರವ ಡಾಕ್ಟರೇಟ್ ನೀಡಿ ಪುರಸ್ಕರಿಸಿದೆ. ಡಾ. ಕೆ.ಎನ್. ಅಡಿಗರವರು ಸಾಂಸ್ಕೃತಿ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಸಲ್ಲಿಸುತ್ತಿರುವ ಸೇವೆಯನ್ನು ಗುರುತಿಸಿ ಹಾಗೂ ಅವರ ಸಾಧನೆಯನ್ನು ಪರಿಗಣಿಸಿ ಗೌರವ ಡಾಕ್ಟರೇಟ್‌ನ್ನು ನೀಡಿದ್ದು, ದಿ. 22.9.2018 ರಂದು ನಡೆದ ಸಮಾರಂಭವೊಂದರಲ್ಲಿ ಡಾಕ್ಟರೇಟ್‌ನ್ನು ಪ್ರದಾನ ಮಾಡಲಾಯಿತು. ಡಾ. ಕೆ.ಎನ್. ಅಡಿಗರಿಗೆ ಹಾರ್ದಿಕ ಅಭಿನಂದನೆ.



☞ ಬಳಗದ ಸಮುದಾಯ ಸೇವಾ ಚಟುವಟಿಕೆ ವಿಭಾಗದ ಸಂಚಾಲಕರಾದ ಶ್ರೀ ಪಿ.ಸಿ.ರಾವ್‌ರವರು ಬೃಹತ್ ಬೆಂಗಳೂರು ಹೋಟೆಲು ಮಾಲೀಕರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಶ್ರೀ ಪಿ.ಸಿ.ರಾವ್ ರವರಿಗೆ ಅಭಿಮಾನದ ಅಭಿನಂದನೆಗಳು.




ಸಾಹಿತಿ ಹಾಗೂ ಸ್ವತಂತ್ರ ಪತ್ರಕರ್ತ ಶ್ರೀ ಕೆ. ಜಯಪ್ರಕಾಶ್‌ರಾವ್ ರವರಿಗೆ ಇತ್ತೀಚೆಗೆ ಪುತ್ತೂರಿನಲ್ಲಿ ನಡೆದ ದ.ಕ.ಜಿಲ್ಲಾ ಸಾಹಿತ್ಯ ಪರಿಷತ್ತು ಸಂಯೋಜಿಸಿದ್ದ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀಯುತರ ಸಾಹಿತ್ಯ ಕ್ಷೇತ್ರ ಹಾಗೂ ಸಾರ್ವಜನಿಕ ಸೇವೆಗೆ ಸಾಧಕ ಪುರಸ್ಕಾರ ನೀಡಿ ಪುರಸ್ಕರಿಸಲಾಗಿದೆ. ಮೈಸೂರಿನ ಹಲವಾರು ಸಾಮಾಜಿಕ ಹಾಗೂ ಯುವಜನ ತರಬೇತಿಗಳಲ್ಲಿ ತೊಡಗಿಸಿಕೊಂಡಿರುವ ಶ್ರೀ ರಾವ್ ಪ್ರಸ್ತುತ ಮೈಸೂರು ನಗರ ಪೋಲೀಸ್ ಘಟಕದ ಮಾಧ್ಯಮ ಹಾಗೂ ಸಾರ್ವಜನಿಕ ಅಭಿಯಾನಗಳ ಗೌರವ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.


## ನಿಧನ

ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಸಹಾಯಕ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಎ. ಲಕ್ಷ್ಮೀ ನಾರಾಯಣ ಆಚಾರ್ ರವರು ದಿ 1.7.2018 ರಂದು ದೈವಾಧೀನರಾಗಿದ್ದಾರೆ. ಮೃತರ ಆತ್ಮಕ್ಕೆ ಭಗವಂತ ಚಿರಶಾಂತಿ ನೀಡಲಿ ಎಂಬ ಪ್ರಾರ್ಥನೆಯೊಂದಿಗೆ ಅವರಿಗೆ ಭೃಗುವಾಣಿಯ ಶ್ರದ್ಧಾಂಜಲಿ.

## ಭಾವಪೂರ್ಣ ಶ್ರದ್ಧಾಂಜಲಿ



ಉಡುಪಿಯ ಶ್ರೀ ಶಿರೂರು ಮಠಾಧೀಶರಾದ ಪೂಜ್ಯ ಶ್ರೀ ಲಕ್ಷ್ಮೀವರ ತೀರ್ಥ ಶ್ರೀ ಪಾದರು ದಿ. 19.7.2018 ರಂದು ಶ್ರೀ ಹರಿಪಾದವನ್ನು ಸೇರಿರುತ್ತಾರೆ. ಪೂಜ್ಯರಿಗೆ ಭಕ್ತಿಪೂರ್ವಕ ನಮನಗಳೊಂದಿಗೆ ಭೃಗುವಾಣಿಯ ಶ್ರದ್ಧಾಂಜಲಿ



ಭಾರತದ ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ದಿ. 16.8.2018 ರಂದು ನಿಧನರಾಗಿದ್ದಾರೆ. ಅಜಾತಶತ್ರು ಎಂದೇ ಜನಪ್ರಿಯರಾಗಿದ್ದ ರಾಷ್ಟ್ರ ಕಂಡ ಧೀಮಂತ ನಾಯಕ ವಾಜಪೇಯಿ ಯವರಿಗೆ ಭಾವಪೂರ್ಣ ಶ್ರದ್ಧಾಂಜಲಿ.


## ಭೃಗುವಾಣಿಯಲ್ಲಿ ಜಾಹೀರಾತಿಗಾಗಿ ಮನವಿ

ಭೃಗುವಾಣಿ ತ್ರೈಮಾಸಿಕ ಪತ್ರಿಕೆಯು, ಆನಂದ ಬಳಗದ ಸುಮಾರು 1800 ಸದಸ್ಯರಿಗೆ ತಲುಪುತ್ತಿದೆ. ಹಾಗೂ ಇತರ ಪ್ರಮುಖ ಸಂಘ–ಸಂಸ್ಥೆಗಳಿಗೂ ಕಳುಹಿಸಲಾಗುತ್ತಿದೆ. ಅಂದರೆ ಭೃಗುವಾಣಿಯ ಓದುಗರ ಒಟ್ಟಾರೆ ಸಂಖ್ಯೆ ಸುಮಾರು 10 ಸಾವಿರದಷ್ಟಿದ್ದು, ಈ ಪತ್ರಿಕೆ ತಮ್ಮ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ಪರಿಚಯಿಸಲು ಪ್ರಭಾವಶಾಲಿಯಾದ ಹಾಗೂ ಪರಿಣಾಮಕಾರಿಯಾದ ಮಾಧ್ಯಮ.

| ಜಾಹೀರಾತು ದರಗಳು (ಪ್ರತಿ ಸಂಚಿಕೆಗೆ) | | |
|---|---|---|
| 2,3 ಮತ್ತು ಹಿಂಬದಿ ಬಹುವರ್ಣ ರಕ್ಷಾಪುಟ | : | ರೂ.3,000/– |
| ಬಹುವರ್ಣ – ಒಳಪುಟ | : | ರೂ.2,000/– |
| ಕಪ್ಪು ಬಿಳುಪು – ಒಳಪುಟ | : | ರೂ.1,500/– |
| ಅರ್ಧಪುಟ | : | ರೂ.750/– |
| ಕಾಲುಪುಟ | : | ರೂ.400/– |

ಜಾಹೀರಾತು ನೀಡಿ ಪ್ರೋತ್ಸಾಹಿಸಲು ಆಸಕ್ತಿಯುಳ್ಳವರು ಸಂಪರ್ಕಿಸಬೇಕಾದ ವಿಳಾಸ :

**ಶ್ರೀ ವೈ. ರಾಧಾಕೃಷ್ಣ**, ಕೋಶಾಧಿಕಾರಿ
98440 58851

**ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿ**, ಜೊತೆ ಕೋಶಾಧಿಕಾರಿ
94481 34268

# Start the day feeling .....



## .......Light & comfortable




**For sure relief from CONSTIPATION use...**

**Dosage:**
Anuloma DS Tablets - 1 to 2 tablets at bedtime with warm water

**Dosage:**
Anuloma Churna - ½ to 1 teaspoonful at bedtime with warm water.

With best compliments from the manufacturers of:

**Anuloma®**
DS Tab and Churna

For Safe and Sure relief from Constipation




BPRL Since 1950

**SAGAR PHARMACEUTICALS**
Herbal Healthcare Division of BPRL PVT. LTD.

Sagar Since 1975

No.163, Reservoir Street, Basavanagudi, Bangalore - 560 004. INDIA. Consumer Care No.: 080-41208661 Website: www.sagarpharma.in

Bhruguvani (July - September 2018) Regd. with RNI under No.KARKAN/2012/45587 No. of Pages : 36 (32+4)




If undelivered please return to:
**Ananda Balaga**
Hotel Ajantha Complex, 22A, M.G. Road
Bengaluru - 560 001
Phone : 2559 4457

Published by Smt. Geetha.V.Rao, President, Ananda Balaga, Bengaluru - 560 001 Printed by Omkar Offset Printers, Bengaluru - 02